ಸ್ಥಾಪನೆ: 1999


# ಸರ್ ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ


(ನೋಂದಣಿ ಸಂಖ್ಯೆ: ಡಿ.ಆರ್.ಬಿ.ಆರ್. 11480:1999–2000)

ತಾಲ್ಲೂಕು ಕ್ರೀಡಾಂಗಣದ ಹತ್ತಿರ, ಜೆ.ಸಿ. ಬಡಾವಣೆ, ಕನಕಪುರ – 562 117, ರಾಮನಗರ ಜಿಲ್ಲೆ.

ದೂರವಾಣಿ: ಕೇಂದ್ರ ಕಛೇರಿ : 080–29562022, ಹಾರೋಹಳ್ಳಿ ಶಾಖೆ : 080–29901441

Web site : http://smvccs.in     email: smvccs1999@gmail.com

# 24ನೇ

# ವಾರ್ಷಿಕ ಸರ್ವಸದಸ್ಯರ ಮಹಾಸಭೆ

**ದಿನಾಂಕ: 24–09–2023ನೇ ಭಾನುವಾರ**

**ಸ್ಥಳ: ಶ್ರೀ ಕೃಷ್ಣ ಕಲ್ಯಾಣ ಮಂಟಪ,**

ಬೂದಿಕೇರಿ ರಸ್ತೆ, ಕನಕಪುರ–562 117, ರಾಮನಗರ ಜಿಲ್ಲೆ.

## 2022–23ನೇ ಸಾಲಿನ ಲೆಕ್ಕ ಪತ್ರಗಳ ವರದಿ

## ಆಡಳಿತ ಮಂಡಳಿ

| | | |
|---|---|---|
| ಶ್ರೀ ಚಂದ್ರ ಕೆ. | – | ಅಧ್ಯಕ್ಷರು |
| ಶ್ರೀ ಜಯರಾಮು ಟಿ. | – | ಉಪಾಧ್ಯಕ್ಷರು |
| ಶ್ರೀ ಟಿ. ಬಿಳಿಗಿರಿರಂಗಸ್ವಾಮಿ | – | ಸಂಸ್ಥಾಪಕ ನಿರ್ದೇಶಕರು |
| ಶ್ರೀ ಕಾಮೇಶ್ | – | ಸಂಸ್ಥಾಪಕ ನಿರ್ದೇಶಕರು |
| ಶ್ರೀ ಮೋಹನ್‌ದಾಸ್ ಆರ್. | – | ನಿರ್ದೇಶಕರು |
| ಶ್ರೀ ರವಿಪಾಲ್ ಬಿ. ಪಿ. | – | ನಿರ್ದೇಶಕರು |
| ಶ್ರೀ ಮಹದೇವಪ್ರಸಾದ್ ಕೆ. ಪಿ. | – | ನಿರ್ದೇಶಕರು |
| ಶ್ರೀ ನಂಜುಂಡಪ್ಪ | – | ನಿರ್ದೇಶಕರು |
| ಶ್ರೀ ಪೆರುಮಾಳಯ್ಯ ಕೆ. ಪಿ. | – | ನಿರ್ದೇಶಕರು |
| ಶ್ರೀ ಮಲ್ಲೇಶ್ ವಿ. | – | ನಿರ್ದೇಶಕರು |
| ಶ್ರೀಮತಿ ರೂಪ ಎನ್. | – | ನಿರ್ದೇಶಕರು |

## ಸಿಬ್ಬಂದಿ ವರ್ಗ

| | | |
|---|---|---|
| ಶ್ರೀಮತಿ ಪದ್ಮಶ್ರೀ ಬಿ.ಎಸ್. | – | ಮುಖ್ಯ ಕಾರ್ಯನಿರ್ವಹಣಾಧಿಕಾರಿ |
| ಶ್ರೀ ಕಾರ್ತಿಕ್ ಆರ್. | – | ಗುಮಾಸ್ತರು |
| ಶ್ರೀಮತಿ ಕಾವ್ಯಶ್ರೀ ಟಿ. ಜೆ. | – | ಗುಮಾಸ್ತರು |
| ಶ್ರೀಮತಿ ಹರ್ಷಿತ | – | ಗುಮಾಸ್ತರು |
| ಕುಮಾರಿ ನವ್ಯ ಎ. | – | ಗುಮಾಸ್ತರು |
| ಶ್ರೀಮತಿ ಪೂಜಾ | – | ಗುಮಾಸ್ತರು |
| ಕುಮಾರಿ ಅಕ್ಷತಾ ಕೆ. ಎಸ್. | – | ಗುಮಾಸ್ತರು |
| ಶ್ರೀ ದರ್ಶನ್ | – | ಗುಮಾಸ್ತರು |
| ಶ್ರೀ ವಿಶ್ವಾಸ್ ಆರ್ | – | ಗುಮಾಸ್ತರು |
| ಶ್ರೀ ದೀಕ್ಷಿತ್ ಕೆ ಎಸ್ | – | ಗುಮಾಸ್ತರು |
| ಶ್ರೀ ವರುಣ್ ಎಸ್ | – | ಗುಮಾಸ್ತರು |
| ಶ್ರೀ ಶಶಾಂಕ್ ಎಸ್ | – | ಗುಮಾಸ್ತರು |
| ಶ್ರೀಮತಿ ಕಮಲಮ್ಮ | – | ಕಛೇರಿ ಸಹಾಯಕರು |
| ಶ್ರೀ ಶ್ರೀನಿವಾಸ್ | – | ಕಛೇರಿ ಸಹಾಯಕರು |
| ಶ್ರೀ ಜಯಕುಮಾರ್ ಎನ್. | – | ನಿತ್ಯ ನಿಧಿ ಸಂಗ್ರಹಕಾರರು |
| ಶ್ರೀ ಗಿರೀಶ್ ಕೆ. ವಿ. | | ನಿತ್ಯ ನಿಧಿ ಸಂಗ್ರಹಕಾರರು |
| ಶ್ರೀ ಮರಿಯಪ್ಪ | | ರಾತ್ರಿ ಕಾವಲುಗಾರ |

# ಅಧ್ಯಕ್ಷರ ನುಡಿ

ಆತ್ಮೀಯ ಸನ್ಮಾನ್ಯ ಗೌರವಾನ್ವಿತ ಸದಸ್ಯರೇ,

ನಮ್ಮ ಸಂಘಕ್ಕೆ 24 ವರ್ಷಗಳು ತುಂಬಿದೆ, ನಿಮ್ಮೆಲ್ಲರ ಸಹಕಾರದಿಂದ ಆಯ್ಕೆ ಆದ ನಮ್ಮ ಸಮಯದಲ್ಲಿ ಸೊಸೈಟಿಯ ವಹಿವಾಟು ವರ್ಷದಿಂದ ವರ್ಷಕ್ಕೆ ಏರು ಮುಖದಲ್ಲೇ ಮುಂದುವರೆಯುತ್ತಿರುವುದರಿಂದ ನಿಮ್ಮೆಲ್ಲರಿಗೂ ನಾನು ಹೃದಯಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಎಲ್ಲಾ ನಿರ್ದೇಶಕರ ಜೊತೆಗೂಡಿ ನುಡಿದಂತೆ ನಡೆದು ಸೊಸೈಟಿಯನ್ನು ಸುಸ್ತಿತಿಗೆ ತಂದಿದ್ದೇವೆ. ನಮ್ಮ ಸೊಸೈಟಿಯಲ್ಲಿರುವ ಎಲ್ಲಾ ಸಿಬ್ಬಂದಿಗಳು ಉತ್ತಮ ರೀತಿಯಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

ಸೊಸೈಟಿಯ ವಹಿವಾಟು ಉತ್ತಮವಾಗಿ ಸುಲಲಿತವಾಗಿ ನಡೆಯಲು ಗಣಕೀಕೃತ ಮಾಡಿರುವ ಜೊತೆಯಲ್ಲಿ ಡಿ.ಡಿ., ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ. ಮತ್ತು ಯು.ಪಿ.ಐ. ಸ್ಕ್ಯಾನ್ ಕೊಡ್ (ಗೂಗಲ್ ಮತ್ತು ಫೋನ್ ಪೇ) ಮೂಲಕ ವಹಿವಾಟನ್ನು ನಡೆಸಲಾಗುತ್ತಿದೆ ಹಾಗೂ ಇ–ಸ್ಟಾಂಪಿಂಗ್ ಸೌಲಭ್ಯವನ್ನು ಎಲ್ಲರಿಗೂ ಸುಲಲಿತವಾಗಿ ನೀಡುತ್ತಿದ್ದೇವೆ. ಖಾತೆಗಳಲ್ಲಿ ನಡೆಸುತ್ತಿರುವ ವಹಿವಾಟಿನ ಮಾಹಿತಿ ತಕ್ಷಣವಾಗಿ ತಿಳಿಯುವಂತೆ ಮೊಬೈಲ್‌ಗೆ ಸಂದೇಶದ (SMS) ಮೂಲಕ ತಲುಪುವ ಸೌಲಭ್ಯವೂ ಕೂಡ ಉತ್ತಮವಾಗಿ ನಡೆಯುತ್ತಿದೆ. ಈಗ ಹೊಸದಾಗಿ ವೆಬ್‌ಸೈಟ್ ಮತ್ತು ಮೊಬೈಲ್ ಆಪ್ ಮೂಲಕ ತಮ್ಮ ಖಾತೆಯ ಬ್ಯಾಲೆನ್ಸ್ ಮತ್ತು ವಹಿವಾಟಿನ ಮಾಹಿತಿ ಒದಗಿಸಲಾಗುತ್ತದೆ. ನಮ್ಮ ಸೊಸೈಟಿಯ ಸದಸ್ಯರು ಮತ್ತು ಅವರ ಕುಟುಂಬದವರಿಗೆ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಸೌಲಭ್ಯವನ್ನು ಸೊಸೈಟಿಯಲ್ಲಿ ನಿಯಮಾನುಸಾರ ಸರ್ಕಾರದಿಂದ ಮಾಡಿಸಿ ಕೊಟ್ಟಿದ್ದೇವೆ.

1999–2000 ದಿಂದ 2018–2019ರವರೆಗೆ ಒಟ್ಟು 20 ವರ್ಷಗಳ ಮರುಲೆಕ್ಕಪರಿಶೋಧನೆಯ ಅವಶ್ಯಕತೆ ಇದೆ ಎಂದು ಸರ್ಕಾರವು ಒಪ್ಪಿ ಒಟ್ಟು 20 ವರ್ಷಗಳ ಮರುಲೆಕ್ಕಪರಿಶೋಧನೆ ಮಾಡಿ ವರದಿಯನ್ನು ನೀಡಲು ಸದರಿಯವರಿಗೆ ಅದೇಶಿಸಲಾಗಿತ್ತು. ಅದರಂತೆ ಸೊಸೈಟಿಯಲ್ಲಿ 20 ವರ್ಷಗಳ ವಹಿವಾಟಿನ ಮರು ಲೆಕ್ಕ–ಪರಿಶೋಧನಾ ಕಾರ್ಯವು ನಡೆದು ಕೊನೆಯ ಹಂತಕ್ಕೆ ತಲುಪಿರುತ್ತೇವೆ. ಮಾರ್ಚ್–2024ರ ಅಂತ್ಯಕ್ಕೆ ಪೂರ್ಣ ವರದಿ ಬರುತ್ತದೆ. ನಂತರ ಸರ್ಕಾರದ ಆದೇಶದಂತೆ ಕೈಗೊಳ್ಳುವ ಕಾನೂನು ಕ್ರಮಗಳಿಗೆ ನಾವು ಸಹಕರಿಸುತ್ತೇವೆ.

1999–2000 ದಿಂದ 2018–2019ರವರೆಗೆ ಒಟ್ಟು 20 ವರ್ಷಗಳ ಮರುಲೆಕ್ಕಪರಿಶೋಧನೆ ಮುಗಿಯುವವರೆಗೂ ಸೊಸೈಟಿಯು ನಷ್ಟದಲ್ಲಿಯೇ ಇರುತ್ತದೆ. ನಮ್ಮಲ್ಲಿ ಎಷ್ಟೇ ಹೆಚ್ಚಿಗೆ ಹಣವಿದ್ದರು ಹಾಗೂ ವಹಿವಾಟು ನಡೆಯುತ್ತಿದ್ದರೂ ಅದನ್ನು ಲಾಭಕ್ಕೆ ಬದಲಾಯಿಸಲು ಸಾದ್ಯವಿಲ್ಲವಾಗಿದೆ. ರೂ. 2 ರಿಂದ ರೂ 2.5 ಕೋಟಿ ಇದ್ದ ಮಾಸಿಕ ವಹಿವಾಟು ಈಗ ರೂ. 3.5 ರಿಂದ ರೂ. 4 ಕೋಟಿಯವರೆಗೂ ಹೆಚ್ಚಾಗಿರುತ್ತದೆ. ಇದರಿಂದ ನಮ್ಮ ವಾರ್ಷಿಕ ವಹಿವಾಟು ರೂ. 36.48 ಕೋಟಿಯಾಗಿರುತ್ತದೆ. ಈ ವರ್ಷದಿಂದ ನಮ್ಮ ಸೊಸೈಟಿಯು “ಸಿ” ವರ್ಗದಿಂದ “ಬಿ” ದರ್ಜೆಗೆ ಮೇಲೇರುವ ಹಂತದಲ್ಲಿದೆ.

ನಮ್ಮ ಸೊಸೈಟಿಯ ಲಾಭಾಂಶ ಹೆಚ್ಚುವರಿಗೆ ವ್ಯವಹಾರವನ್ನು ಹೆಚ್ಚಿಸಬೇಕಾಗಿರುವುದರಿಂದ ಹಾಗೂ ಕನಕಪುರದಲ್ಲಿ ಹೆಚ್ಚಿನ ಸೊಸೈಟಿಗಳು ಕಾರ್ಯನಿರ್ವಹಿಸುತ್ತಿದ್ದು ಸ್ಪರ್ಧಾತ್ಮಕ ವಾತಾವರಣದಿಂದ ನಮ್ಮ ಸೊಸೈಟಿಯ ವ್ಯವಹಾರದ ಅಭಿವೃದ್ಧಿಯ ಹಿತದೃಷ್ಟಿಯಿಂದ ಸೊಸೈಟಿಯ ಕಾರ್ಯಕ್ಷೇತ್ರ ವ್ಯಾಪ್ತಿಗೆ ಒಳಪಡುವ ಹೆಚ್ಚಿನ ವ್ಯಾಪಾರ ವಹಿವಾಟು ನಡೆಯುತ್ತಿರುವ ಹಾರೋಹಳ್ಳಿಯಲ್ಲಿ ನೂತನ ಶಾಖೆಯನ್ನು ಪ್ರಾರಂಭಿಸಿರುತ್ತೇವೆ. ಆಡಳಿತ ಮಂಡಳಿಯ ಸದಸ್ಯರುಗಳ ಮತ್ತು ತಮ್ಮೆಲ್ಲರ ಸಹಕಾರದಿಂದ ವಹಿವಾಟು ನಡೆಯುತ್ತಿದೆ. ಆಭರಣ ಸಾಲ, ವಿವಿಧ ಬ್ಯಾಂಕಿನ ಖಾತೆಗಳಲ್ಲಿ ಇರುವ ಒಟ್ಟು ಶಿಲ್ಕು, ವಿವಿಧ ಬ್ಯಾಂಕ್/ಸಂಸ್ಥೆಗಳ ಶೇರು, ಠೇವಣಿಗಳಲ್ಲಿ ಹೂಡಿರುವ ಮೊತ್ತ, ಎಲ್ಲಾ ಬಗೆಯ ಸಾಲ ಮುಂಗಡಗಳಿದ್ದು, ಹಿಂದಿನ ಸಾಲಿನಿಂದ ದಾಖಲಾತಿಗಳಿಲ್ಲದೆ ಮುಂದುವರೆದ ಇತರೆ ಸಾಲ, ಸುಸ್ತಿಯಾದ ಬಾಕಿ ಸಾಲ, ಸ್ಥಿರಾಸ್ತಿ ಮತ್ತು ಇತರೆ ಬರತಕ್ಕ ಬಾಕಿಗಳಿದ್ದು ಒಟ್ಟಾರೆ ಸಂಸ್ಥೆಯ ಆಸ್ತಿ ರೂ. 13 ರಿಂದ ರೂ.15 ಕೋಟಿಯವರೆಗೂ ಇರುತ್ತದೆ.

**ಇಂತಿ ತಮ್ಮ ವಿಶ್ವಾಸಿ,**
**ಶ್ರೀ ಚಂದ್ರ ಕೆ.**
**ಅಧ್ಯಕ್ಷರು**

# ಸರ್ ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

(ನೋಂದಣಿ ಸಂಖ್ಯೆ: ಡಿ.ಆರ್.ಬಿ.ಆರ್. 11480 : 1999–2000)

ತಾಲ್ಲೂಕು ಕ್ರೀಡಾಂಗಣದ ಹತ್ತಿರ, ಜೆ.ಸಿ. ಬಡಾವಣೆ, ಕನಕಪುರ–562117, ರಾಮನಗರ ಜಿಲ್ಲೆ.

## ಇಪ್ಪತ್ತಾಲ್ಕನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ಸೂಚನಾ ಪತ್ರ

ಸನ್ಮಾನ್ಯ ಸದಸ್ಯರೇ,

ಈ ಕೆಳಗೆ ಕಾರ್ಯಸೂಚಿಯಲ್ಲಿ ನಮೂದಿಸಿದ ಕಾರ್ಯ ಕಲಾಪಗಳನ್ನು ನೆರವೇರಿಸಲು ಸಂಘದ 2022–2023ನೇ ಸಾಲಿನ 24ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಶ್ರೀ ಕೃಷ್ಣ ಕಲ್ಯಾಣ ಮಂಟಪದಲ್ಲಿ ದಿನಾಂಕ: 24-09-2023ರ ಭಾನುವಾರದಂದು ಬೆಳಿಗ್ಗೆ 10:00 ಗಂಟೆಗೆ ಸರಿಯಾಗಿ ಸೊಸೈಟಿಯ ಅಧ್ಯಕ್ಷರಾದ ಶ್ರೀ ಕೆ. ಚಂದ್ರರವರ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಸಭೆಗೆ ಹಾಜರಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.

### ಕಾರ್ಯಸೂಚಿ

1. ಪ್ರಾರ್ಥನೆ
2. ಸ್ವಾಗತ
3. ನಿಧನ ಹೊಂದಿರುವ ಸದಸ್ಯರಿಗೆ ಶ್ರದ್ಧಾಂಜಲಿ ಹಾಗೂ ವಿಶ್ವಶಾಂತಿಗಾಗಿ ಒಂದು ನಿಮಿಷ ಮೌನ ಪ್ರಾರ್ಥನೆ.
4. 2022–23ನೇ ಸಾಲಿನ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು.
5. ವೆಬ್ ಸೈಟ್: http://smvccs.in ಗಣ್ಯರಿಂದ ಉದ್ಘಾಟನೆ.
6. ದಿನಾಂಕ: 28–08–2022ರಂದು ನಡೆದ ಇಪ್ಪತ್ಮೂರನೇ ಸರ್ವಸದಸ್ಯರ ಸಭೆಯ ನಡಾವಳಿಕೆಗಳನ್ನು ಓದಿ ದಾಖಲು ಮಾಡುವುದು.
7. 2022–23ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಅಂಗೀಕರಿಸುವುದು.
8. 2022–23ನೇ ಸಾಲಿನ ಸಂಘದ ಲೆಕ್ಕಪರಿಶೋಧನಾ ವರದಿಯಲ್ಲಿನ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ ಜವಾಬ್ದಾರಿ ತಃಖ್ತೆಯನ್ನು ಓದಿ ಅಂಗೀಕರಿಸುವುದು.
9. 2022–23ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚಿನ ಖರ್ಚನ್ನು ಮಂಜೂರು ಮಾಡುವುದು.
10. 2023–24ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.
11. 2023–24ನೇ ಸಾಲಿನ ಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಿಶೋಧಕರ ನೇಮಕಾತಿ ಬಗ್ಗೆ.
12. ಪ್ರಶ್ನೋತ್ತರ ಅವಧಿ.
13. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಚಾರಗಳು.
14. ವಂದನಾರ್ಪಣೆ.

ದಿನಾಂಕ : 23–08–2023
ಸ್ಥಳ : ಕನಕಪುರ

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
**ಶ್ರೀಮತಿ ಪದ್ಮಶ್ರೀ ಬಿ.ಎಸ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

## ವಿಶೇಷ ಸೂಚನೆ

1. ಸಭೆಗೆ ಆಗಮಿಸುವಾಗ ದಯಮಾಡಿ ಸಭೆಯ ನೋಟೀಸು ಪುಸ್ತಕವನ್ನು ಜೊತೆಯಲ್ಲಿ ತರಬೇಕಾಗಿ ಕೋರಿದೆ.
2. ಮಹಾಸಭೆಗೆ ಭಾಗವಹಿಸುವುದಕ್ಕೆ ಮೊದಲು ಸದಸ್ಯರು ದಯಮಾಡಿ ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡುವುದು.
2. ಸಭೆಯ ಚರ್ಚೆಯಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಸದಸ್ಯರು ಸಭೆಗೆ 5 ದಿನದ ಮೊದಲು ಸಭೆಯಲ್ಲಿ ಚರ್ಚಿಸಬೇಕಾದ ವಿಷಯದ ಬಗ್ಗೆ ಸಂಘದ ಕಛೇರಿಗೆ ಬಂದು ಅಥವಾ ಇ-ಮೇಲ್ ವಿಳಾಸ smvccs1999@gmail.comಕ್ಕೆ ವಿಷಯವನ್ನು ರವಾನಿಸಿ ಕಡ್ಡಾಯವಾಗಿ ನೊಂದಾಯಿಸಿಕೊಳ್ಳಲು ವಿನಂತಿಸಿದೆ. ನೋಂದಣಿಗೊಂಡಿರದ ಹೊರತು ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ನೀಡಲು ಸಾಧ್ಯವಿರುವುದಿಲ್ಲ.
3. <u>ಅರ್ಹ ಸದಸ್ಯರೆಂದರೆ:</u>

   ಅ) ಸಂಘದಲ್ಲಿ ಸಾಲ ಪಡೆದು ಸಾಲದ ಕರಾರಿನಂತೆ ನಿಗಧಿತ ಕಾಲಾವಧಿಯಲ್ಲಿ ಸಾಲದ ಕಂತು ಮತ್ತು ಬಾಕಿಯನ್ನು ಮರುಪಾವತಿಸಿದ ಸದಸ್ಯರು.

   ಆ) ಸಂಘದಲ್ಲಿ ಸದಸ್ಯರಿದ್ದು ಸಂಘದ ಉಪನಿಯಮಗಳಲ್ಲಿ ಗೊತ್ತು ಪಡಿಸಿದಂತೆ ವಾರ್ಷಿಕ ಕನಿಷ್ಠ ವ್ಯವಹಾರವನ್ನು ಕೈಗೊಂಡಿರುವ ಸದಸ್ಯರು.

   ಇ) ಸಂಘದಲ್ಲಿ ಸದಸ್ಯರಿದ್ದು ಹಿಂದಿನ 05 ವಾರ್ಷಿಕ ಮಹಾಸಭೆಗಳಲ್ಲಿ 03 ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದ ಸದಸ್ಯರು.

## ಸಂಘದ ಉಪನಿಯಮಗಳ ಸಂಖ್ಯೆ 18ರ ಪ್ರಕಾರ ಸದಸ್ಯತ್ವದ ಅನರ್ಹತೆಗಳು

1. ಸಂಘದ ಅಥವಾ ಅದರ ಹಣಕಾಸು ಸಂಸ್ಥೆಯ ನೌಕರನಾಗಿರತಕ್ಕದಲ್ಲ.
2. ಸಂಘದ ಸದಸ್ಯತ್ವ ಪಡೆಯಲು ಕಾಯ್ದೆಯ ಕಲಂ 16ರಡಿ ಅರ್ಹನಾಗಿರತಕ್ಕದ್ದು.
3. ಸಂಘದ ಕಾರ್ಯಕ್ಷೇತ್ರದಲ್ಲಿ ವಾಸಮಾಡಿರತಕ್ಕದ್ದು ಮತ್ತು ಸಂಘ ನಡೆಸುತ್ತಿರುವಂತಹ ಯಾವುದೇ ಬಗೆಯ ವ್ಯವಹಾರಗಳನ್ನು ನಡೆಸುತ್ತಿರತಕ್ಕದ್ದಲ್ಲ.
4. ಸಂಘದಿಂದ ಪಡೆದ ಯಾವುದೇ ಸಾಲದ ಸುಸ್ತಿದಾರನಾಗಿರತಕ್ಕದಲ್ಲ.
5. ತನ್ನ ವಾಸಸ್ಥಳ ಅಥವಾ ವಿಳಾಸದಲ್ಲಿ ಯಾವುದೇ ರೀತಿಯ ಬದಲಾವಣೆಯಾದ 15 ದಿನದೊಳಗಾಗಿ ಲಿಖಿತದಲ್ಲಿ ಸಂಘಕ್ಕೆ ತಿಳಿಸತಕ್ಕದ್ದು.
6. ಸದಸ್ಯತ್ವದ ಹಕ್ಕನ್ನು ಪಡೆಯಲು ಅಗತ್ಯವಾದ ಷೇರು ಬಂಡವಾಳದ ಮುಖಬೆಲೆಯನ್ನು ಹೆಚ್ಚಿಸಿದ ಸಂದರ್ಭದಲ್ಲಿ, ಸಂಘ ಅಂತಹ ಹೆಚ್ಚುವರಿ ಮೊಬಲಗನ್ನು ಪಾವತಿಸಲು ನೀಡಿದ ನೋಟೀಸಿನ ನಂತರ ನಿಗದಿತ ವಾಯಿದೆಯೊಳಗೆ ಪಾವತಿಸಕ್ಕದ್ದು.
7. ಸಂಘದ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ಕೃತ್ಯಗಳನ್ನು ಎಸಗತಕ್ಕದಲ್ಲ.
8. ಸಾಮಾನ್ಯ ಸಭೆಯಲ್ಲಿ ಕಾಯ್ದೆಯ ನಿಯಮಗಳ ಅಥವಾ ಉಪವಿಧಿಗಳ ಉಪಬಂಧಗಳಿಗೆ ವಿರುದ್ಧವಾದ ಅಥವಾ ಸಂಘದ ಹಿತಕ್ಕೆ ಧಕ್ಕೆ ತರುವಂತಹ ಯಾವುದೇ ನಿರ್ಣಯಕ್ಕೆ ಭಾಗಿದಾರನಾಗಿರತಕ್ಕದಲ್ಲ.

ಅಧ್ಯಕ್ಷರು, ಮುಖ್ಯಕಾರ್ಯನಿರ್ವಹಣಾಧಿಕಾರಿ

**ಸರ್.ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ**

ಕನಕಪುರ

ಸ್ಥಾಪನೆ: 1999

# ಸರ್.ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ

(ನೋಂದಣಿ ಸಂಖ್ಯೆ: ಡಿ.ಆರ್.ಬಿ.ಆರ್. 11480:1999-2000)

ತಾಲ್ಲೂಕು ಕ್ರೀಡಾಂಗಣದ ಹತ್ತಿರ, ಜೆ.ಸಿ. ಬಡಾವಣೆ, ಕನಕಪುರ-562117, ರಾಮನಗರ ಜಿಲ್ಲೆ.

ದೂರವಾಣಿ: 080-27524722, 080-29562022

ವೆಬ್ ಸೈಟ್: http://smvccs.in, ಇ-ಮೇಲ್: smvccs1999@gmail.com

## ಆಡಳಿತ ಮಂಡಳಿ ವರದಿ

1. ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರ ಪರವಾಗಿ ಇಪ್ಪತ್ನಾಲ್ಕನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಆಗಮಿಸಿರುವ ಮಾನ್ಯ ಸದಸ್ಯರುಗಳಿಗೆ ಹೃತ್ಪೂರ್ವಕ ಸ್ವಾಗತ, 2022-23ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಸಭೆಯ ಒಪ್ಪಿಗೆಗಾಗಿ ತಮ್ಮ ಸಮ್ಮುಖದಲ್ಲಿರಿಸಲಾಗಿದೆ.
2. 2022-23ನೇ ಸಾಲಿನಲ್ಲಿ 12 ಆಡಳಿತ ಮಂಡಳಿಯ ಮಾಸಿಕ ಸಭೆಗಳು ನಡೆದಿವೆ.
3. 2022-23ನೇ ಸಾಲಿನ ಅಖೈರಿಗೆ ಒಟ್ಟು ರೂ. 1,45,000.00 ಷೇರುಧನ ಜಮಾ ಆಗಿರುತ್ತದೆ. ಹಾಗೂ 31-03-2023ಕ್ಕೆ ಒಟ್ಟಾರೆ ರೂ. 34,98,100.00 ಷೇರು ಧನ ಇರುತ್ತದೆ.
4. 2022-23ನೇ ಸಾಲಿನ ಅಖೈರಿಗೆ ಠೇವಣಿಗಳ ಶಿಲ್ಕು ರೂ. 9,02,65,841.79 ಆಗಿರುತ್ತದೆ.
5. 31ನೇ ಮಾರ್ಚ್ 2023ರಂದು ಸಂಘದ ಖಾತೆಯಲ್ಲಿ ಬಿ.ಬಿ.ಆರ್&ಆರ್.ಡಿ.ಸಿ.ಸಿ ಬ್ಯಾಂಕ್‌ನಲ್ಲಿ ರೂ. 21,54,734.98, ಬ್ಯಾಂಕ್ ಆಫ್ ಬರೋಡದಲ್ಲಿ ರೂ. 62,142.49, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೂ. 2,91,943.08, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೂ. 45,939.60 ಮತ್ತು ಐಡಿಬಿಐ ಬ್ಯಾಂಕ್‌ನಲ್ಲಿ ರೂ. 26,61,168.80 ಮತ್ತು ಅರ್ಬನ್ ಕೋ ಆಪರೇಟಿವ್ ಸೊಸೈಟಿಯಲ್ಲಿ ರೂ.23,97,791.00ಇರುತ್ತದೆ. ಅದೇ ಮಾರ್ಚ್ 31ರಂದು ಸಂಘದ ಕಛೇರಿಯಲ್ಲಿ ರೂ. 4,61,261.00 ನಗದು ಶಿಲ್ಕು ಇರುತ್ತದೆ.
6. 2022-23ನೇ ಸಾಲಿನ ಸಹಕಾರಿ ವರ್ಷದಲ್ಲಿ ಆಭರಣ ಸಾಲವಾಗಿ ರೂ. 2,34,24,500.00 ಜಾಮೀನು ಸಾಲವಾಗಿ ರೂ. 9,00,000.00 ಸಿಬ್ಬಂದಿ ಸಾಲವಾಗಿ ರೂ.8,00,000.00 ಮತ್ತು ಠೇವಣಿ ಸಾಲ ರೂ. 42,08,200.00 ಆಸ್ತಿ ಆಧಾರ ಸಾಲ ರೂ.85,50,000/- ನೀಡಲಾಗಿದೆ.
7. 2022-2023 ನೇ ಸಾಲಿನಲ್ಲಿ ದೈವಾಧೀನರಾದ ಸದಸ್ಯರು.

| ಕ್ರ.ಸಂ. | ಹೆಸರು | ಸದಸ್ಯತ್ವ ಸಂಖ್ಯೆ |
|---|---|---|
| 1. | ವೃಷಭಯ್ಯ | 158 |
| 2. | ಚಿಕ್ಕೆಂಪಯ್ಯ | 619 |
| 3. | ತೆರೆಸ್‌ರಾಜು | 419 |
| 4. | ಪ್ರಕಾಶ್ ಕೆ ವಿ | 1076 |
| 5. | ಶ್ರೀನಿವಾಸ ಹೆಚ್ | 621 |
| 6. | ರಾಜು ಹೆಚ್.ಎಸ್ | 1231 |
| 7. | ಗೋಪಿ | 1031 |

## 8. 2022–23ನೇ ಸಾಲಿನಲ್ಲಿ ನೀಡಿದ ದೇಣಿಗೆಗಳ ವಿವರ


| ಕ್ರ.ಸಂ. | ಹೆಸರು | ರೂ.ಗಳು |
|---|---|---|
| 1. | ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸೇವಾ ಸಂಘಕ್ಕೆ ಪೌರಕಾರ್ಮಿಕರಿಗೆ ಸನ್ಮಾನ ಮತ್ತು ಪೌರಕಾರ್ಮಿಕರ ದಿನಾಚರಣೆಗೆ ದೇಣಿಗೆ. | 2,000–00 |
| 2 | ಶ್ರೀ ವಿದ್ಯಾಗಣಪತಿ ಮಿತ್ರಕೂಟ ದೇವಸ್ಥಾನ ಕೋಟೆ ಕನಕಪುರಕ್ಕೆ ಅನ್ನದಾನಕ್ಕೆ ದೇಣಿಗೆ. | 1000–00 |
| 3. | 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ಗೆ ದೇಣಿಗೆ | 5000–00 |
| 4. | ಶ್ರೀ ದ್ರೌಪದಿ ಧರ್ಮರಾಯ ಸ್ವಾಮಿ 26ನೇ ವರ್ಷದ ಕರಗ ಮಹೋತ್ಸವಕ್ಕೆ ದೇಣಿಗೆ | 2000–00 |
| 5 | ದೇಶಪೇಟೆ ಮಹಾಜನ ಸಭಾ ಕಾಮಣ್ಣ ರತಿದೇವಿಯ ಹಬ್ಬಕ್ಕೆ | 3000–00 |
| 6. | ಕಿಲ್ಲೆ ರಂಗನಾಥ ಸ್ವಾಮಿ ದೇವಸ್ಥಾನದ ಶ್ರೀ ಗುರುರಾಘವೇಂದ್ರ ಸ್ವಾಮಿ ಆರಾಧನ ಮಹೋತ್ಸವ | 3000–00 |

9. 2022–23ನೇ ಸಾಲಿನ ಲೆಕ್ಕ–ಪರಿಶೋಧನೆಯನ್ನು ನಡೆಸಿಕೊಟ್ಟಂತಹ ಜಿ.ಬಿ. ಶಿಲ್ಪ & ಕಂಪನಿರವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇವೆ.

10. ಸಹಕಾರಿ ಇಲಾಖೆಯ ಅಧಿಕಾರಿಗಳು ಸಂಘದ ಕೆಲಸ ಕಾರ್ಯಗಳಲ್ಲಿ ಆಡಳಿತಾತ್ಮಕವಾಗಿ ಸಲಹೆ ಸೂಚನೆಗಳನ್ನು ಕೊಟ್ಟು ಸಹಕರಿಸುತ್ತಿದ್ದು, ಇವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇವೆ.

11. ಸೊಸೈಟಿಯ ಯಶಸ್ಸಿಗೆ ಕಾರಣವಾದ ಸದಸ್ಯರಿಗೆ, ಸಿಬ್ಬಂದಿ ವರ್ಗದವರಿಗೆ ಹಾಗೂ ಬಿ.ಡಿ.ಸಿ.ಸಿ. ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ಮತ್ತು ಐಡಿಬಿಐ ಬ್ಯಾಂಕ್ ಮತ್ತು ಅರ್ಬನ್ ಕೋ ಆಪರೇಟಿವ್ ಸೊಸೈಟಿ ನಿ., ಸಮಸ್ತ ಸಿಬ್ಬಂದಿಗಳಿಗೆ ಹಾಗೂ ಸಂಘದ ಕಾನೂನು ಸಲಹೆಗಾರರಿಗೆ ಮತ್ತು ಆಸ್ತಿ ಮೌಲ್ಯಮಾಪಕರಿಗೆ ಹಾಗೂ ಚಿನ್ನಾಭರಣ ಮೌಲ್ಯಮಾಪಕರಿಗೆ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

12. ಸೊಸೈಟಿಯ ಏಳಿಗೆಗೆ ದುಡಿಯುತ್ತಿರುವ ಸಿಬ್ಬಂದಿ ವರ್ಗದವರಿಗೆ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.



ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

**ಶ್ರೀಮತಿ ಪದ್ಮಶ್ರೀ ಬಿ.ಎಸ್.**

ಮುಖ್ಯಕಾರ್ಯನಿರ್ವಹಣಾಧಿಕಾರಿ

ದಿನಾಂಕ : 24–09–2023

ಸ್ಥಳ : ಕನಕಪುರ

# 2021-22ನೇ ಸಾಲಿನ 23ನೇ ಸರ್ವಸದಸ್ಯರ ಸಾಮಾನ್ಯ ಸಭೆಯ ನಡಾವಳಿ

**ಸ್ಥಳ: ತಾಲ್ಲೂಕು ಕ್ರೀಡಾಂಗಣದ ಹತ್ತಿರ, ಜೆ.ಸಿ. ಬಡಾವಣೆ, ಕನಕಪುರ-562117,ರಾಮನಗರ ಜಿಲ್ಲೆ.**

**ಸರ್.ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ, ಕನಕಪುರದ 2021-22ನೇ ಸಾಲಿನ 23ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 28-08-2022ನೇ ಭಾನುವಾರ ಸಂಘದ ಅಧ್ಯಕ್ಷರಾದ ಶ್ರೀ ಕೆ. ಚಂದ್ರು ರವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 10-00 ಗಂಟೆಗೆ ಸರಿಯಾಗಿ ಕರೆಯಲಾಗಿದ್ದು ಈ ಕೆಳಕಂಡ ಕಾರ್ಯ ಸೂಚಿಯಂತೆ ಕಲಾಪಗಳು ನಡೆದವು.**

1. **ಪ್ರಾರ್ಥನೆ:** ಸಂಘದ ನಿರ್ದೇಶಕರಾದ ಶ್ರೀಮತಿ ರೂಪರವರು ಕಾರ್ಯಕ್ರಮದಲ್ಲಿ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಸಭೆಯು ಪ್ರಾರಂಭವಾಯಿತು.
2. **ಸ್ವಾಗತ :** ಸಂಘದ ಉಪಾಧ್ಯಕ್ಷರಾದ ಶ್ರೀ ಟಿ. ಜಯರಾಮುರವರು ಸಭೆಗೆ ಆಗಮಿಸಿದ ಅಧ್ಯಕ್ಷರಾದ ಶ್ರೀ ಚಂದ್ರ ಕೆ ರವರಿಗೆ, ಹಾಗೂ ಸಂಘದ ಎಲ್ಲಾ ನಿರ್ದೇಶಕರಿಗೆ, ಸರ್ವ ಸದಸ್ಯರುಗಳಿಗೆ, ಮುಖ್ಯ ಅತಿಥಿಗಳಿಗೂ, ಸಿಬ್ಬಂದಿ ವರ್ಗದವರಿಗೂ ಮತ್ತು ಪತ್ರಕರ್ತ ಮಿತ್ರರಿಗೂ ಸ್ವಾಗತ ಕೋರಿದರು.
3. **ನಿಧನ ಹೊಂದಿರುವ ಸದಸ್ಯರಿಗೆ ಶ್ರದ್ಧಾಂಜಲಿ ಹಾಗೂ ವಿಶ್ವಶಾಂತಿಗಾಗಿ ಒಂದು ನಿಮಿಷ ಮೌನ ಪ್ರಾರ್ಥನೆ:**

   ಸಂಘದ ಸಿಬ್ಬಂದಿಯಾದ ಶ್ರೀ ಕಾರ್ತಿಕ್‌ರವರು, ನಮ್ಮನ್ನು ಅಗಲಿದ ನಮ್ಮ ಸಂಸ್ಥೆಯ ಷೇರುದಾರರಿಗೆ ಹಾಗೂ ಕೋವಿಡ್-19ರಿಂದ ನಿಧನ ಹೊಂದಿದ ಜನರಿಗೆ ಶ್ರದ್ದಾಂಜಲಿ ಮತ್ತು ವಿಶ್ವಶಾಂತಿಗಾಗಿ ಒಂದು ನಿಮಿಷ ಮೌನ ಪ್ರಾರ್ಥನೆ ಮಾಡಲು ಸಭೆಗೆ ಕೋರಲು ಸಭೆಯಲ್ಲಿ ಎಲ್ಲರೂ ಒಂದು ನಿಮಿಷ ಮೌನ ಪ್ರಾರ್ಥನೆ ಸಲ್ಲಿಸಲಾಯಿತು.
4. **2021-22ನೇ ಸಾಲಿನ ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು ಓದಿ ದಾಖಲು ಮಾಡುವುದು**

   ನಮ್ಮ ಸಂಘದ ನಿರ್ದೇಶಕರಾದ ಕೆ.ಎಸ್. ಕಾಶೀಪತಿ ರವರು ಸೂಚನಾಪತ್ರವನ್ನು ಓದಿ ದಾಖಲಿಸಿದರು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.
5. **ದಿನಾಂಕ: 28-08-2022ರಂದು ನಡೆದ ಇಪ್ಪತ್ತೂರನೇ ಸರ್ವಸದಸ್ಯರ ಸಭೆಯ ನಡಾವಳಿಕೆಗಳನ್ನು ಓದಿ ದಾಖಲು ಮಾಡುವುದು.**

   ದಿನಾಂಕ:28-08-2022ರಂದು ನಡೆದ ಇಪ್ಪತ್ತೂರನೇ ಸರ್ವಸದಸ್ಯರ ಸಭೆಯ ನಡಾವಳಿಕೆಯನ್ನು ಸಂಘದ ನಿರ್ದೇಶಕರಾದ ಶ್ರೀ ಕೆ.ಪಿ ಪೆರುಮಾಳಯ್ಯರವರು ಸಭೆಗೆ ಓದಿ ತಿಳಿಸಿದರು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.
6. **2021-2022ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಅಂಗೀಕರಿಸುವುದು.**

   2021-2022ನೇ ಸಾಲಿನ ಆಡಳಿತ ಮಂಡಳಿ ವರದಿಯನ್ನು ಸಂಘದ ಕಾರ್ಯದರ್ಶಿಯಾದ ಶ್ರೀಮತಿ ಪದ್ಮಶ್ರೀ ಬಿ.ಎಸ್‌ರವರು ಸಭೆಗೆ ಮಂಡಿಸಿದರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.
7. **2021-2022 ನೇ ಸಾಲಿನ ಸಂಘದ ಲೆಕ್ಕಪರಿಶೋಧನಾ ವರದಿಯಲ್ಲಿನ ಜಮಾ-ಖರ್ಚು, ಲಾಭ-ನಷ್ಟ, ಆಸ್ತಿ-ಜವಾಬ್ದಾರಿ ತಃಖ್ತೆಯನ್ನು ಓದಿ ಅಂಗೀಕರಿಸುವುದು.**

   2021-22ನೇ ಸಾಲಿನ ಲೆಕ್ಕಪರಿಶೋಧನೆ ವರದಿಯಲ್ಲಿನ ಜಮಾ-ಖರ್ಚು, ಲಾಭ-ನಷ್ಟ, ಆಸ್ತಿ-ಜವಾಬ್ದಾರಿಯ ತಃಖ್ತೆಯನ್ನು ಸಂಘದ ಕಾರ್ಯದರ್ಶಿಯಾದ ಶ್ರೀಮತಿ ಪದ್ಮಶ್ರೀ ಬಿ.ಎಸ್‌ರವರು ಸಭೆಗೆ ಮಂಡಿಸಿದರು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

**8. 2021–22ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚಿನ ಖರ್ಚನ್ನು ಮಂಜೂರು ಮಾಡುವುದು ಮತ್ತು**
**9. 2022–2023ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಮಂಜೂರು ಮಾಡುವುದು.**

2021–22ನೇ ಸಾಲಿನ ಆಯ–ವ್ಯಯಕ್ಕಿಂತ ಹೆಚ್ಚಿನ ಖರ್ಚನ್ನು ಮಂಜೂರು ಮಾಡುವುದು ಮತ್ತು 2022–23ನೇ ಸಾಲಿನ ಅಂದಾಜು ಆಯ–ವ್ಯಯವನ್ನು ಸಂಘದ ನಿರ್ದೇಶಕರಾದ ಶ್ರೀ ಟಿ ಬಿಳಿಗಿರಿರಂಗಸ್ವಾಮಿ ರವರು ಸಭೆಯಲ್ಲಿ ಮಂಡಿಸಿದರು ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿತು

**10. 2022–23ನೇ ಸಾಲಿನ ಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಶೋಧಕರ ನೇಮಕಾತಿ ಬಗ್ಗೆ.**

2022–23 ನೇ ಸಾಲಿನ ಲೆಕ್ಕಪರಿಶೋಧಕರಾಗಿ ಜಿ.ಬಿ. ಶಿಲ್ಪ ಆಂಡ್ ಕಂಪನಿ ಅಸೋಸಿಯೇಟ್ಸ್ 10ನೇ ಕ್ರಾಸ್, ಜಯನಗರ ಪೂರ್ವ ವಾರ್ಡ್, ನಂ–31 ತುಮಕೂರು–572102 ರವರನ್ನು ಲೆಕ್ಕಪರಿಶೋಧನೆ ಮಾಡಲು ಲೆಕ್ಕಪರಿಶೋಧಕರಾಗಿ ನೇಮಕಾತಿ ಮಾಡಲು ನಿರ್ದೇಶಕರಾದ ಶ್ರೀ ಮಲ್ಲೇಶ್. ವಿ. ರವರು ಸಭೆಯಲ್ಲಿ ಮಂಡಿಸಿದರು. ಸದಸ್ಯರುಗಳೆಲ್ಲಾ ಚರ್ಚಿಸಿ ಸಭೆಯು ಸರ್ವಾನುಮತದಿದಂದ ಅಂಗೀಕರಿಸಿತು.

**11. ಸೊಸೈಟಿಯ ಉಳಿತಾಯ ಖಾತೆಯಲ್ಲಿ ವ್ಯವಹಾರ ಮಾಡದೇ ನಿಷ್ಕ್ರಿಯವಾಗಿರುವ ಖಾತೆಗಳ ಮತ್ತು ನೂತನ ಮುಖಬೆಲೆಗೆ ಬದಲಾಯಿಸಿಕೊಳ್ಳದೆ ಷೇರುಗಳ ಷೇರುದಾರರ ಮೇಲೆ ಜರುಗಿಸಿರುವ ಕ್ರಮದ ಬಗ್ಗೆ.**

31–03–2022 ರ ಅಂತ್ಯಕ್ಕೆ ವ್ಯವಹಾರ ಮಡದೇ ನಿಷ್ಕ್ರಿಯ ಹೊಂದಿದ 953 ಮೈನರ್ ಉಳಿತಾಯ ಖಾತೆಗಳನ್ನು ಮತ್ತು ನೂತನ ಮುಖಬೆಲೆಗೆ ಬದಲಾಯಿಸಿಕೊಳ್ಳದೆ ರೂ. 1000 ಗಳ ಮುಖಬೆಲೆಗಿಂತ ಕಡಿಮೆ ಮೊತ್ತದ ಷೇರುಗಳು ಒಟ್ಟು 21 ಷೇರು ಖಾತೆಗಳನ್ನು ಅಮಾನತು ಖಾತೆಗೆ ವರ್ಗಾಹಿಸಲಾಯಿತು ಎಂದು ಕಾರ್ಯದರ್ಶಿರವರು ಸರ್ವ ಸದಸ್ಯರ ಸಭೆಗೆ ತಿಳಿಸಿದರು ಸಭೆಯು ಒಪ್ಪಿ ಅಂಗೀಕರಿಸಿತು.

**12. ಹಿಂದಿನ ಸಾಲುಗಳಲ್ಲಿ(1999–2000 ರಿಂದ 2018–19) ನಡೆದಿರುವ ಆಡಳಿತಾತ್ಮಕ ಮತ್ತು ವ್ಯವಹರಾತ್ಮಕ ಲೋಪದೋಷಗಳ ಬಗ್ಗೆ 20 ವರ್ಷಗಳ ಮರು ಲೆಕ್ಕಪರಿಶೋಧನೆ ಮಾಡಲು ಸರ್ಕಾರದಿಂದ ಬಂದಿರುವ ಆದೇಶದಂತೆ ಮರುಲೆಕ್ಕಪರಿಶೋಧನೆ ನಡೆಯುತ್ತಿರುವ ಬಗ್ಗೆ**

ಸಂಘದ ನಿರ್ದೇಶಕರಾದ ಶ್ರೀ ರವಿಪಾಲ್ ಬಿ.ಪಿ. ರವರು ಆಂತರಿಕ ಲೆಕ್ಕಪರಿಶೋಧನೆಯ ಆಧಾರದ ಮೇಲೆ 1999–2000 ದಿಂದ 2018–2019ರವರೆಗೆ ಮರು ಲೆಕ್ಕಪರಿಶೋಧನೆ ಮಾಡುವಂತೆ ಕರ್ನಾಟಕ ಸಹಕಾರ ಇಲಾಖೆಯಿಂದ ಆದೇಶವಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಬೇಕಾಗಿರುವ 20 ವರ್ಷಗಳ ಪೂರ್ಣ ದಾಖಲಾತಿಗಳನ್ನು ಆಡಿಟರ್‌ಗೆ ನೀಡಿ ತನಿಖೆಗೆ ಅನುಕೂಲವಾಗುವಂತೆ ಆಡಿಟರ್ ಮಾರ್ಗದರ್ಶನದ ರೀತಿಯಲ್ಲಿ ಜೋಡಿಸಲಾಗುತ್ತಿದೆ.

13. **ನೂತನ ಶಾಖೆಗಳನ್ನು ಪ್ರಾರಂಭಿಸುವ ಬಗ್ಗೆ.**

ನಮ್ಮ ಸೊಸೈಟಿಯ ಲಾಭಾಂಶ ಹೆಚ್ಚುವರಿಗೆ ವ್ಯವಹಾರವನ್ನು ಹೆಚ್ಚಿಸ ಬೇಕಾಗಿರುವುದರಿಂದ ಹಾಗೂ ಕನಕಪುರದಲ್ಲಿ ಹೆಚ್ಚಿನ ಸೊಸೈಟಿಗಳು ಕಾರ್ಯನಿರ್ವಹಿಸುತ್ತಿದ್ದು ಸ್ಪರ್ಧಾತ್ಮಕ ವಾತಾವರಣದಿಂದ ನಮ್ಮ ಸೊಸೈಟಿಯ ವ್ಯವಹಾರದ ಅಭಿವೃದ್ಧಿಯ ಹಿತದೃಷ್ಟಿಯಿಂದ ಸೊಸೈಟಿಯ ಕಾರ್ಯಕ್ಷೇತ್ರ ವ್ಯಾಪ್ತಿಗೆ

ಒಳಪಡುವ ಕನಕಪುರ ತಾಲ್ಲೂಕಿನ ಹೆಚ್ಚಿನ ವ್ಯಾಪಾರ ವಹಿವಾಟು ನಡೆಯುತ್ತಿರುವ ಸ್ಥಳಗಳಾದ ಹಾರೋಹಳ್ಳಿ, ಸಾತನೂರು, ಕೋಡಿಹಳ್ಳಿ ಹಾಗೂ ಭೌಗೋಳಿಕ ವ್ಯಾಪ್ತಿಗೆ ಸೀಮಿತವಾಗಿರುವಂತಹ ಸ್ಥಳಗಳಲ್ಲಿ ಸಂದರ್ಭಕ್ಕೆ ಅನುಗುಣವಾಗಿ ನೂತನ ಶಾಖೆಗಳನ್ನು ಪ್ರಾರಂಭ ಮಾಡಲು ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿ ಸರ್ವಾನುಮತದಿಂದ ಅಂಗೀಕರಿಸಿತು.

14. **ಪ್ರಶ್ನೋತ್ತರ ಅವಧಿ.**

ಸದಸ್ಯರಾದ ಶ್ರೀ ಸಿದ್ದರಾಜು ಸದಸ್ಯತ್ವ ಸಂಖ್ಯೆ 1192 ಸದರಿಯವರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾವಲುಗಾರರ ವೇತನವು 2021–22ನೇ ಸಾಲಿನ ವಾಸ್ತವಿಕ ವೆಚ್ಚ ಮತ್ತು 2022–23ನೇ ಸಾಲಿನ ಅಂದಾಜು ಆಯ–ವ್ಯಯಕ್ಕೆ ಸಂಬಂಧಪಟ್ಟಂತೆ: ಕಾವಲುಗಾರರ ವೇತನವು ಅಂದಾಜು ವೆಚ್ಚ 2021–2022 ರಲ್ಲಿ 1,60,000/–(ಒಂದು ಲಕ್ಷದ ಅರವತ್ತು ಸಾವಿರ ರೂ) ಹೆಚ್ಚಾಗಿ ತೋರಿಸಿರುತ್ತೀರಿ, ವಾಸ್ತವಿಕ ವೆಚ್ಚ 2021–22 ರಲ್ಲಿ 1,08,000/– (ಒಂದು ಲಕ್ಷದ ಎಂಟು ಸಾವಿರ ರೂ.) ಖರ್ಚು ಆಗಿರುತ್ತದೆ.

**ಸಮಜಾಯಿಷಿ:** ನಿರ್ದೇಶಕರಾದ ಶ್ರೀ ಬಿ ಪಿ ರವಿಪಾಲ್‌ರವರು ಸದರಿಯವರ ಸಲಹೆಗೆ ಸಮಜಾಯಿಷಿ ನೀಡುತ್ತಾ ನಮ್ಮ ಸಂಘದಲ್ಲಿ ಹಿಂದಿನ ಸಾಲುಗಳಲ್ಲಿ ಇಬ್ಬರು ಕಾವಲುಗಾರರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರ ಅಂದಾಜು ವೆಚ್ಚ 2021–22 ಕ್ಕೆ ಆಯ–ವ್ಯಯವನ್ನು 1,60,000/– (ಒಂದು ಲಕ್ಷದ ಅರವತ್ತು ಸಾವಿರ ರೂ) ಕಾಯ್ದಿರಿಸಲಾಗಿತ್ತು. ಆದರೆ ನಮ್ಮ ಸಂಘಕ್ಕೆಸಂಘಕ್ಕೆ ಹಗಲು ಕಾವಲುಗಾರರನ್ನು ರದ್ದುಗೊಳಿಸಿ ವಾಣಿಜ್ಯ ಜ್ಞಾನವುಳ್ಳ "ಡಿ" ಗ್ರೂಪ್ ಸಿಬ್ಬಂದಿಯನ್ನು ತೆಗೆದುಕೊಂಡು ಸಂಘದ ವ್ಯವಹಾರಕ್ಕೆ ಮತ್ತು ರಾತ್ರಿ ಕಾವಲುಗಾರರ ಕಾರ್ಯವನ್ನು ನಿರ್ವಹಿಸಲು ನೇಮಕ ಮಾಡಿಕೊಂಡಿರುತ್ತೇನೆ ಹಾಗೂ ಮುಂದೆ ನಾವು ನೂತನ ಶಾಖೆಯನ್ನು ಪ್ರಾರಂಭ ಮಾಡಿಕೊಳ್ಳುವುದರಿಂದ ಅಂದಾಜು 2022–2023 ಕ್ಕೆ ರೂ. 2,00,000/– (ಎರಡು ಲಕ್ಷ ರೂ)ವನ್ನು ಪರಿಗಣಿಸಿ ಮಂಜೂರು ಮಾಡುವಂತೆ ಸಮಜಾಯಿಷಿ ಉತ್ತರ ನೀಡಿದರು.

**ಸದಸ್ಯರಾದ ಶ್ರೀ ಸಿದ್ದರಾಜು ಸದಸ್ಯತ್ವ ಸಂಖ್ಯೆ 1192:**

**ಸದರಿಯವರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವೆ 2021–22ನೇ ಸಾಲಿನ ಯಂತ್ರೋಪಕರಣ ಮತ್ತು ಪೀಠೋಪಕರಣಗಳ ಬಗ್ಗೆ:**

**ಸಮಜಾಯಿಷಿ:** ನಿರ್ದೇಶಕರಾದ ಶ್ರೀ ರವಿಪಾಲ್ ಬಿ.ಪಿ ರವರು ಯಂತ್ರೋಪಕರಣ, ವಿದ್ಯುತ್ ಉಪಕರಣಗಳು ಹಾಗೂ ಪೀಠೋಪಕರಣಗಳ ಬಗ್ಗೆ ವಿವರಿಸಿದರು.

**ಸದಸ್ಯರಾದ ಶ್ರೀ ಸಂತು ರಾಮ್ ರಾವ್ ಬಿ. ಆರ್. ಸದಸ್ಯತ್ವ ಸಂಖ್ಯೆ 691 ಮತ್ತು ಸದಸ್ಯರಾದ ಶ್ರೀ ಸಿದ್ದರಾಜು ಸದಸ್ಯತ್ವ ಸಂಖ್ಯೆ 1192 ಸದರಿಯವರು ಬೂದಿಕೇರಿ ರಸ್ತೆಯಲ್ಲಿರುವ ನಿವೇಶನದಲ್ಲಿ ಕಟ್ಟಡ ಕಟ್ಟಲು ಚರ್ಚಿಸಿದರು.**

**ಸಮಜಾಯಿಷಿ:** ನಿರ್ದೇಶಕರಾದ ಶ್ರೀ ರವಿಪಾಲ್. ಬಿ.ಪಿ. ರವರು ಈಗ ಕಲಂ 64ರ ಮರುಲೆಕ್ಕಪರಿಶೋಧನೆ ನಡೆಯುತ್ತಿದ್ದು ಪರಿಶೋಧನೆ ಆದ ನಂತರ ಸರ್ಕಾರದ ಆದೇಶದ ಮೇರೆಗೆ ಬರಬೇಕಾದ ಮೊತ್ತ ವಸೂಲಾದ ನಂತರ ಮುಂದಿನ ವರ್ಷಗಳಲ್ಲಿ 25 ನೇ ವಾರ್ಷಿಕ ಸಭೆಯಷ್ಟರಲ್ಲಿ ನೂತನ ಕಟ್ಟಡವನ್ನು ನಿರ್ಮಿಸಲು ಪ್ರಯತ್ನಿಸುತ್ತೇವೆ ಎಂದು ತಿಳಿಸಿದರು.

**ಸದಸ್ಯರಾದ ಶ್ರೀ ಹುಚ್ಚೇಗೌಡ ಸದಸ್ಯತ್ವ ಸಂಖ್ಯೆ 1164:**

ಸದರಿಯವರು ಪುಟ ಸಂಖ್ಯೆ 23 ರಲ್ಲಿ ಲಾಭ–ನಷ್ಟದ ತಃಖ್ತೆಯಲ್ಲಿ 2021–2022 ನೇ ಸಾಲಿನ ನಿವ್ವಳ ಲಾಭ ಎಂದು 1,16,465( ಒಂದು ಲಕ್ಷದ ಹದಿನಾರು ಸಾವಿರದ ನಾಲ್ಕು ನೂರ ಅರವತ್ತೈದು ರೂ ಮಾತ್ರ) ನ್ನು ತೋರಿಸಿರುತ್ತೀರಿ 2021–2022 ರಲ್ಲಿ ಲಾಭನ ಅಥವಾ ನಷ್ಟನ ಎಂದು ಕೇಳಿದಾಗ.

**ಸಮಜಾಯಿಷಿ:** ನಿರ್ದೇಶಕರಾದ ಶ್ರೀ ರವಿಪಾಲ್ ಬಿ.ಪಿ. ರವರು 2021–2022ನೇ ಸಾಲಿನ ಒಂದು ವರ್ಷದ ಜಮಾ–ಖರ್ಚಿನ ತಃಖ್ತೆಯಂತೆ ಬಂದಿರುವ ವಾರ್ಷಿಕ ಲಾಭ ಎಂದು ಸಭೆಗೆ ತಿಳಿಸಿದರು.

**15. ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಚಾರಗಳು:**

**ಅ) ನಿಶ್ಚಿತ ಠೇವಣಿ ಬಡ್ಡಿ ಮತ್ತು ಸಾಲದ ಬಡ್ಡಿ ದರವನ್ನು ಬದಲಾವಣೆ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿಯವರಿಗೆ ನೀಡುವ ಬಗ್ಗೆ.**

ದಿನಾಂಕ:19–08–2022 ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಬ್ಯಾಂಕಿನ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದ ವಿಷಯವಾದ ನಮ್ಮ ಸೊಸೈಟಿಯಲ್ಲಿ ನೀಡುವ ಎಲ್ಲಾ ಸಾಲಗಳ ಮೇಲೆ ಬಡ್ಡಿ ದರವನ್ನು ಗ್ರಾಹಕರು ಮತ್ತು ಗ್ರಾಹಕರು ನೀಡುವ ಭದ್ರತೆಯ ಆಧಾರದ ಮೇಲೆ ಬಡ್ಡಿ ದರವನ್ನು ನಿಗದಿಪಡಿಸುವುದು, ಸಾಲವು ಸುಸ್ತಿಯಾದರೆ ಅದರ ಬಡ್ಡಿ ದರವನ್ನು ಹೆಚ್ಚುವರಿ ಮಾಡುವುದು ಮತ್ತು ಒಂದೇ ತಿರುವಳಿಯಲ್ಲಿ ಸಾಲ ತಿರುವಳಿ ಮಾಡಿಸುವ ಅಧಿಕಾರಗಳನ್ನು ಆಡಳಿತ ಮಂಡಳಿಗೆ ನೀಡುವುದು ಹಾಗೂ ಮಾಸಿಕ ಕಂತುಗಳನ್ನು ಸಾಲ ಪಡೆಯುವ ಗ್ರಾಹಕರ ಆಯ್ಕೆಯಂತೆ ಸಾಲ ನೀಡುವ ಅವಕಾಶಗಳನ್ನು ಹಾಗೂ ನಿಶ್ಚಿತ ಠೇವಣಿಯ ಬಡ್ಡಿ ದರವನ್ನು ಬದಲಾವಣೆ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿಗೆ ನೀಡಲು ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದಾಗ ಸರ್ವಸದಸ್ಯರು ಅನುಮೋದಿಸಿದರು.

**ಆ) ಆಸ್ತಿ ಆಧಾರ ಸಾಲವನ್ನು 10,00,000/–(ಹತ್ತು ಲಕ್ಷ ರೂ) ದಿಂದ 25,00,000/– (ಇಪತ್ತೈದು ಲಕ್ಷ ರೂ.) ವರೆಗೆ ಹೆಚ್ಚುವರಿ ಮಾಡಿಕೊಳ್ಳುವುದು ಹಾಗೂ ಜಾಮೀನು ಸಾಲಗಳ ಮಿತಿಯನ್ನು ಹೆಚ್ಚುವರಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿಯವರಿಗೆ ನೀಡುವ ಬಗ್ಗೆ:**

ದಿನಾಂಕ: 16–04–2022 ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಸೊಸೈಟಿಯ ಅಭಿವೃದ್ಧಿಗೆ ಸಂಬಂದಿಸಿದಂತೆ ಚರ್ಚಿಸಲಾಗಿದ್ದ ವಿಷಯಗಳಾದ ಆಸ್ತಿ ಆಧಾರ ಸಾಲದ ಸದರಿ ಮಿತಿಯನ್ನು ರೂ. 10,00,000/– (ಹತ್ತು ಲಕ್ಷ ರೂ) ದಿಂದ ರೂ.25,00,000/–(ಇಪತ್ತೈದು ಲಕ್ಷ ರೂ) ವರೆಗೆ ಹೆಚ್ಚುವರಿ ಮಾಡಿಕೊಳ್ಳುವುದು ಮತ್ತು ದಿನಾಂಕ: 19–08–2022 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿದಂತೆ ಎಲ್ಲಾ ರೀತಿಯ ಜಾಮೀನು ಸಾಲಗಳ ಮಿತಿಗಳನ್ನು ಹೆಚ್ಚುವರಿ ಮಾಡಿಕೊಂಡು ಸೊಸೈಟಿಯನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗುವ ಜವಬ್ದಾರಿಯೊಂದಿಗೆ ಹೆಚ್ಚುವರಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿಗೆ ನೀಡಿ ಎಂದು ಸರ್ವಸದಸ್ಯರು ಸಭೆಯಲ್ಲಿ ಮಂಡಿಸಿದಾಗ ಆಡಳಿತ ಮಂಡಳಿಯವರ ಸಂಪೂರ್ಣ ಜವಾಬ್ದಾರಿಯೊಂದಿಗೆ ಹೆಚ್ಚುವರಿ ಮಾಡಿಕೊಳ್ಳುವ ಅಧಿಕಾರವನ್ನು ಆಡಳಿತ ಮಂಡಳಿಯವರಿಗೆ ನೀಡಲು ಸಭೆಯಲ್ಲಿ ಸರ್ವ ಸದಸ್ಯರು ನೀಡಿ ಅನುಮೋದಿಸಿದರು.

16. ಪ್ರತಿಭಾ ಪುರಸ್ಕಾರ ನೀಡಿದ ಬಗ್ಗೆ:

2021–2022ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ 60% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಸಂಘದ ಸದಸ್ಯರ ಮಕ್ಕಳನ್ನು ಈ ಕೆಳಕಂಡಂತೆ ಪ್ರತಿಭಾ ಪುರಸ್ಕಾರವನ್ನು ಪಡೆಯಲು ಆಹ್ವಾನಿಸಿದರು.

**–: ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ವಿವರ :–**

| ಕ್ರ.ಸಂ. | ವಿಧ್ಯಾರ್ಥಿ / ವಿಧ್ಯಾರ್ಥಿನಿ ಹೆಸರು | ಶೇಕಡವಾರು | ಪೋಷಕರ ಹೆಸರು | ಸದಸ್ಯತ್ವ ಸಂಖ್ಯೆ |
|---|---|---|---|---|
| 1. | ಲಿಖಿತಶ್ರೀ ಕೆ ಎಮ್ | 85.30% | ಮಹದೇವಪ್ರಸಾದ್ ಕೆ ಪಿ | 26 |
| 2. | ನಮಿತ ಕೆ ಎಸ್ | 74.00% | ಲೇ॥ ಶಿವಶಂಕರಪ್ಪ ವಿ | 976 |
| 3. | ಸಂವೃದ್ ಢಗೆ | 92.64% | ಶಂಕರ್ ಕೆ ಎನ್. | 309 |
| 4. | ಮೇಘನ ಜಿ | 72.64% | ಗಂಗರಾಜು ಪಿ | 254 |
| 5. | ರಾಹುಲ್ ಗೌಡ ಯು | 88.16% | ಉಮೇಶ್ ಎಚ್ | 355 |
| 6. | ಸೋನ ಜಿ | 92.64% | ಆಶಾಕುಮಾರಿ ಎಂ | 1503 |
| 7. | ಹರ್ಷಿತ್ ಸಿ | 84.00% | ಚಂದ್ರು | 1069 |
| 8. | ಪ್ರಜ್ವಲ್ ಆರ್ ಕುಮಾರ್ | 93.00% | ರವಿಕುಮಾರ್ ಕೆ ಆರ್ | 973 |
| 9 | ವರ್ಷ ಎಂ | 98.24% | ಮಧುರಾಜನ್ ಪಿ | 194 |
| 10. | ಮೋಹನ್ ಗೌಡ ಆರ್ | 91.20% | ರಾಜೇಶ ಬಿ | 1104 |
| 11. | ಪೂರ್ಣಿಮಾ ಆರ್ | 92.64% | ರಮೇಶ ಪಿ | 1215 |
| 12. | ಸಿಂಚನ ಕೆ ಎಂ | 83.20% | ಶಶಿರೇಖಾ ಜಿ ಆರ್ | 1089 |
| 13. | ರಾಹುಲ್ ಭರಧ್ವಾಜ್ ಕೆ ಎಸ್ | 88.30% | ಸಂಪತ್ ಕುಮಾರ್ ಕೆ ಟಿ | 1312 |
| 14. | ಚಂದನ್ ಜೆ | 78.72% | ಜಗದೀಶ್ ಕೆ ಪಿ | 1227 |
| 15 | ಲಿಖಿತ್ ಎಂ | 89.12% | ಮೋಹನ್ ಕುಮಾರ್ ಕೆ ಪಿ | 1274 |
| 16 | ಸಮ್ಮತಿ ಎಸ್ | 68.00% | ಸತೀಶ್ ಕುಮಾರ್ ಕೆ ಬಿ | 1260 |
| 17. | ಹರ್ಷಿತ ವಿ | 88.16% | ವೆಂಕಟೇಶ್ ವಿ | 885 |
| 18. | ಗಿರೀಶ್ ಜಿ ಆರ್ | 94.00% | ರಮೇಶ್ ಜಿ ವಿ | 1350 |



## -: ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳ ವಿವರ :-

| ಕ್ರ.ಸಂ. | ವಿಧ್ಯಾರ್ಥಿ / ವಿಧ್ಯಾರ್ಥಿನಿ ಹೆಸರು | ಶೇಕಡವಾರು | ಪೋಷಕರ ಹೆಸರು | ಸದಸ್ಯತ್ವ ಸಂಖ್ಯೆ |
|---|---|---|---|---|
| 1. | ಪವನ್ ಕುಮಾರ್ ಸಿ ಕೆ | 68.00% | ಕಬ್ಬಳಯ್ಯ ಕೆ | 1377 |
| 2. | ಅನಘ ಅಯ್ಯಂಗಾರ್ | 74.80% | ರಂಗರಾಜನ್ ಎಸ್ | 250 |
| 3. | ಧನುಶ್ರೀ ಕೆ ಜಿ | 66.00% | ವೆಂಕಟೇಸ್ ಕೆ ಜಿ | 939 |
| 4. | ಶಶಾಂಕ್ ಕೆ ಆರ್ | 79.66% | ರವೀಂದ್ರ ಟಿ ಎಸ್ | 342 |
| 5. | ಪ್ರಕೃತಿ ಎಸ್ | 93.33% | ಶಿವರಾಜು ಕೆ | 1505 |
| 6. | ಪವಿತ್ರ ಎಂ | 91.50% | ಮಂಜುನಾಥ್ ಜಿ | 1442 |
| 7. | ದೀಕ್ಷಾ ಜಿ | 88.00% | ಗಿರೀಶ್ ಕೆ ಹೆಚ್ | 454 |
| 8. | ನವ್ಯಶ್ರೀ ಎನ್ | 97.83% | ಭೈರಪ್ಪ ಕೆ ಜಿ ಉರ್ಫ ನಾಗೇಶ್ | 1504 |
| 9. | ನರೇಂದ್ರ ಎನ್ | 62.00% | ನಂಜುಂಡಪ್ಪ | 1096 |
| 10. | ಮೋನಿಶ ಸಿ | 91.50% | ಚಿಕ್ಕಲಿಂಗಪ್ಪ | 129 |
| 11. | ಲಿಖಿತ್ ಯಾದವ್ ಎನ್ | 84.00% | ನಾಗರಾಜು | 1127 |
| 12. | ಮನಿಕಂಠ ಪಿ | 91.00% | ಲಕ್ಷ್ಮಿ ಪಿ | 1121 |
| 13. | ಸಹನ ಜೆ | 85.67% | ಜಗದೀಶ್ ಕೆ ಪಿ | 1227 |
| 14. | ಬೃಂದ ಎಂ | 87.00% | ಮೋಹನ್ ದಾಸ್ ಆರ್ | 388 |
| 15. | ರಾಘವೇಂದ್ರ | 85.16% | ಈರೇಶ್ ಕೆ | 1095 |
| 16. | ದರ್ಶನ್ ಜಿ | 88.00% | ಗೋವಿಂಧರಾಜಿ ಜಿ | 1065 |
| 17 | ಕ್ಷಮಾ ಕೆ ಜೆ | 83.83% | ಜಯಕುಮಾರ್ ಎನ್ | 1188 |
| 18. | ರಾಘವ್ ಎನ್ | 66.66% | ಭೈರಪ್ಪ ಕೆ ಜಿ ಉರಪ್ ನಾಗೇಶ್ | 1504 |
| 19. | ಪೂಜಾ ಜಿ | 85.50% | ಆಶಾಕುಮಾರಿ ಎಂ | 1503 |

**17. ವಂದನಾರ್ಪಣೆ:**

ಸಂಘದ ನಿರ್ದೇಶಕರಾದ ಶ್ರೀ ಕಾಮೇಶ್‌ರವರು ಅಧ್ಯಕ್ಷರಿಗೂ, ಉಪಾಧ್ಯಕ್ಷರಾದ ಶ್ರೀ ಜಯರಾಮು ಟಿ ರವರಿಗೂ, ಸಂಸ್ಥಾಪಕ ನಿರ್ದೇಶಕರಾದ ಶ್ರೀ ಟಿ ಬಿಳಿಗಿರಿರಂಗಸ್ವಾಮಿ, ಶ್ರೀ ಕಾಮೇಶ್ ರವರಿಗೂ, ನಿರ್ದೇಶಕರುಗಳಾದ ಶ್ರೀ ರವಿಪಾಲ್ ಬಿ. ಪಿ. ಶ್ರೀ ಆರ್ ಮೋಹನ್‌ದಾಸ್, ಶ್ರೀ ಪೆರುಮಾಳಯ್ಯ ಕೆ. ಪಿ, ಶ್ರೀ ನಂಜುಂಡಪ್ಪ, ಶ್ರೀ ಮಹದೇವಪ್ರಸಾದ್, ಶ್ರೀ ಮಲ್ಲೇಶ್. ವಿ, ಶ್ರೀ ಕಾಶೀಪತಿ ಕೆ.ಎಸ್, ಶ್ರೀಮತಿ ರೂಪರವರೆಲ್ಲರಿಗೂ ಮತ್ತು ಈ ಸಭೆಗೆ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಯಾಗಿ ಶ್ರಮಿಸಿದ ಕಾನೂನು ಸಲಹೆಗಾರರಿಗೆ, ಚಿನ್ನಾಭರಣ ಮೌಲ್ಯ ಮಾಪಕರಿಗೂ, ಪತ್ರಕರ್ತ ಮಿತ್ರರಿಗೂ ಹಾಗೂ ನಮಗೆ ಸಹಕರಿಸಿರುವ ಅರ್ಬನ್ ಕೋ-ಆಪರೇಟಿವ್ ಸೊಸೈಟಿ, ಬಿಡಿಸಿಸಿ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಐಡಿಬಿಐ ಬ್ಯಾಂಕ್‌ನ ಸಿಬ್ಬಂದಿ ವರ್ಗದವರಿಗೂ ವಂದನೆಗಳನ್ನು ತಿಳಿಸಿದರು ಮತ್ತು ನಮ್ಮ ಸೊಸೈಟಿಯ ಕಾರ್ಯದರ್ಶಿರವರಾದ ಶ್ರೀಮತಿ ಪದ್ಮಶ್ರೀ ಬಿ.ಎಸ್. ರವರಿಗೂ ಮತ್ತು ಸಿಬ್ಬಂದಿ ವರ್ಗದವರಿಗೆ ವಂದನೆಯನ್ನು ತಿಳಿಸಿದರು. ಅಂತಿಮವಾಗಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಭೆಯನ್ನು ಯಶಸ್ವಿಗೊಳಿಸಿದಂತಹ ಎಲ್ಲರಿಗೂ ವಂದಿಸಿದರು.

**ಅಧ್ಯಕ್ಷರ ಅಪ್ಪಣೆ ಮೇರೆಗೆ 2021-2022ನೇ ಸಾಲಿನ 23ನೇ ವಾರ್ಷಿಕ ಸರ್ವ ಸದಸ್ಯರ ಸಭೆಯು ಮುಕ್ತಾಯವಾಯಿತು**

## 2022-23ನೇ ಸಾಲಿನ ವಾಸ್ತವಿಕ ವೆಚ್ಚ ಮತ್ತು
## ಕನಕಪುರ ಶಾಖೆ & ಹಾರೋಹಳ್ಳಿ ಶಾಖೆಯ 2023-24ನೇ ಸಾಲಿನ ಅಂದಾಜು ಆಯ-ವ್ಯಯ

| ವಿವರಗಳು | ಅಂ.ವೆ. 2022-2023 | ವಾ.ವೆ. 2022-2023 | ವ್ಯತ್ಯಾಸ | ಅಂದಾಜು 2023-2024 |
|---|---|---|---|---|
| | ರೂ. ಪೈ. | ರೂ. ಪೈ. | ರೂ. ಪೈ. | ರೂ. ಪೈ. |
| ಕಛೇರಿ ಬಾಡಿಗೆ | 3,40,000.00 | 2,74,000.00 | 66,000.00 | 4,44,000.00 |
| ಮುದ್ರಣ ಮತ್ತು ಲೇಖನ ಸಾಮಾಗ್ರಿ | 1,50,000.00 | 1,07,122.00 | 42,878.00 | 1,50,000.00 |
| ಸಿಬ್ಬಂದಿ ಸಂಬಳ | 18,00,000.00 | 16,24,002.00 | 1,75,998.00 | 24,50,000.00 |
| ಪ್ರಯಾಣ ವೆಚ್ಚ | 30,000.00 | 62,169.00 | -32,169.00 | 65,000.00 |
| ಅಂಚೆ ಮತ್ತು ದೂರವಾಣಿ | 1,00,000.00 | 25,762.00 | 76,943.00 | 50,000.00 |
| ಕಛೇರಿ ನಿರ್ವಹಣೆ | 70,000.00 | 73,659.00 | -3,659.00 | 1,00,000.00 |
| ನಿತ್ಯನಿಧಿ ಕಮಿಷನ್ | 12,00,000.00 | 10,25,700.00 | 1,74,300.00 | 11,00,000.00 |
| ವೃತ್ತ ಪತ್ರಿಕೆ | 5,500.00 | 3,885.00 | 1,615.00 | 5,000.00 |
| ಜಾಹಿರಾತು | 1,00,000.00 | 20,700.00 | 79,300.00 | 1,00,000.00 |
| ಅತಿಥಿ ಸತ್ಕಾರ | 15,000.00 | 3742.00 | 11,258.00 | 10,000.00 |
| ದೇಣಿಗೆ ಮತ್ತು ಪ್ರತಿಭಾ ಪುರಸ್ಕಾರ | 1,00,000.00 | 53,000.00 | 47,000.00 | 1,00,000.00 |
| ವಿದ್ಯುತ್ ಶುಲ್ಕ | 75,000.00 | 48,165.00 | 26,835.00 | 75,000.00 |
| ಸಿಬ್ಬಂದಿ ಯೋಗಕ್ಷೇಮ | 33,000.00 | 3773.00 | 29,227.00 | 10,000.00 |
| ವಿಮೆ | 2,10,000.00 | 51,671.00 | 1,58,329.00 | 1,00,000.00 |
| ವಾರ್ಷಿಕ ಮಹಾ ಸಭೆಯ ವೆಚ್ಚ | 2,50,000.00 | 1,89,780.00 | 60,220.00 | 2,50,000.00 |
| ಮೀಟಿಂಗ್ ಖರ್ಚು | 60,000.00 | 27,689.00 | 32,311.00 | 50,000.00 |
| ಪೂಜಾ ಖರ್ಚು | 25,000.00 | 15,773.00 | 9,227.00 | 20,000.00 |
| ಪೀಠೋಪಕರಣ | 3,00,000.00 | 1,28,770.00 | 1,71,230.00 | 1,00,000.00 |
| ಕಾವಲುಗಾರರ ವೇತನ | 2,00,000.00 | 1,13,500.00 | 86,500.00 | 2,10,000.00 |
| ವಿದ್ಯುತ್ ಉಪಕರಣ | 3,00,000.00 | 2,55,920.00 | 44,080.00 | 50,000.00 |
| ಗಣಕಿಯಂತ್ರಗಳು ಮತ್ತು ಸಾಫ್ಟ್‌ವೇರ್ | 3,00,000.00 | 3,68,328.00 | -68,328.00 | 1,00,000.00 |
| ದುರಸ್ತಿ ಮತ್ತು ನಿರ್ವಹಣಾ ವೆಚ್ಚ | | 8,550.00 | 8,550.00 | 25,000.00 |
| ಒಟ್ಟು | 56,63,500.00 | 44,64,960.00 | 11,18,345.00 | 55,64,000.00 |

# ಸರ್. ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿಯಮಿತ
## ಕನಕಪುರ

**ದಿನಾಂಕ: 1–4–2022 ರಿಂದ 31–3–2023ರ ವರೆಗಿನ ಜಮಾ ಖರ್ಚಿನ ತ:ಖ್ತೆ**

| ಕ್ರ.ಸಂ. | ವಿವರಗಳು | ಜಮಾ | ಖರ್ಚು |
|---|---|---|---|
| 1. | **ಷೇರು ಬಂಡವಾಳ** | 1,45,000.00 | 1,67,000.00 |
| | ಸದಸ್ಯರ ಪಾಲು ಹಣ | 1,45,000.00 | 1,67,000.00 |
| | | | |
| 2. | **ನಿಧಿಗಳು** | 1,30,275.00 | 2,01,400.00 |
| | ಶೈಕ್ಷಣಿಕ ನಿಧಿ | 37,000.00 | 37,000.00 |
| | ಜಾಹಿರಾತು ನಿಧಿ | 20,700.00 | 20,700.00 |
| | ಮರಣೋತ್ತರ ನಿಧಿ | 35,000.00 | 35,000.00 |
| | ಕಟ್ಟಡ ನಿಧಿ | 21,720.00 | – |
| | ಧರ್ಮಾರ್ಥ ನಿಧಿ | – | 16,000.00 |
| | ಕ್ಷೇಮ ನಿಧಿ | 15,855.00 | 92,700.00 |
| | | | |
| 3. | **ಸವಕಳಿ ನಿಧಿ** | 2,95,513.00 | |
| | ಸವಕಳಿ ವಿದ್ಯತ್ ಉಪಕರಣಗಳು | 75,049.00 | |
| | ಸವಕಳಿ ಕಬ್ಬಿಣದ ಉಪಕರಣಗಳು | 16,343.00 | |
| | ಗಣಕಯಂತ್ರ | 1,37,753.00 | |
| | ಪಿಠೋಪಕರಣ | 49,425.00 | |
| | ದ್ವಿಚಕ್ರ | 16,943.00 | |
| | | | |
| 4 | **ಹೂಡಿಕೆಗಳು** | 36,57,853.28 | 1,11,15,693.66 |
| | ಅರ್ಬನ್ ಕೋ. ಆಪರೇಟಿವ್ ಸೊಸೈಟಿ ಖಾಯಂ ಠೇವಣಿ | 15,00,000.00 | 70,00,000.00 |
| | ಬಿಬಿಆರ್ ಮತ್ತು ಅರ್ ಡಿ ಸಿ ಸಿ ಬ್ಯಾಂಕ್ ಖಾಯಂ ಖಾತೆ | 98,252.00 | – |
| | ಬಿಡಿಸಿಸಿ ಬ್ಯಾಂಕ್ ನಿಶ್ಚಿತ ಠೇವಣಿ | 20.00,000.00 | 40,00,000.00 |
| | ಭವಿಷ್ಯ ನಿಧಿ ಅಂಚೆ ಕಛೇರಿ | – | 1,15,644.00 |
| | ಇ–ಸ್ಟಾಂಪಿಂಗ್ ಕರೆನ್ಸಿ | 59,601.28 | 49.66 |
| | | | |
| 5 | **ಬ್ಯಾಂಕ್ ಖಾತೆಗಳು** | 3,81,85,477.30 | 3,75,91,236.80 |
| | ಅರ್ಬನ್ ಕೋ. ಆಪರೇಟಿವ್ ಸೊಸೈಟಿ ಉಳಿತಾಯ ಖಾತೆ | 1,52,00,600.00 | 1,38,16,832.00 |
| | ಐಡಿಬಿಐ ಬ್ಯಾಂಕ್ ಚಾಲ್ತಿ ಖಾತೆ | 1,69,83,930.00 | 1,66,33,848.80 |
| | ಬಿಬಿಆರ್ ಮತ್ತು ಆರ್‌ಡಿಸಿಸಿ ಬ್ಯಾಂಕ್ ಚಾಲ್ತಿ ಖಾತೆ | 40,00,729.00 | 54,72,941.00 |
| | ಎಸ್ ಬಿಐ ಚಾಲ್ತಿ ಖಾತೆ | 20,00,047.20 | 16,52,615.00 |
| | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಖಾತೆ | 82.60 | – |
| | ಬ್ಯಾಂಕ್ ಆಫ್ ಬರೋಡ ಚಾಲ್ತಿ ಖಾತೆ | 88.50 | 15,000.00 |

| ಕ್ರ.ಸಂ. | ವಿವರಗಳು | ಜಮಾ | ಖರ್ಚು |
|---|---|---|---|
| 6 | **ಇತರೆ ಜವಾಬ್ದಾರಿಗಳು** | 7,68,577.00 | 3,09,671.00 |
| | ಜಿ.ಎಲ್.ಕಮಿಷನ್ | 70,964.00 | 70,964.00 |
| . | ಟಿ.ಡಿ.ಎಸ್ | 64,310.00 | 64,,487.00 |
| | ಭವಿಷ್ಯನಿಧಿ | 1,15,644.00 | – |
| | ಸ್ಥಿರಾಸ್ತಿಗಳ ಮೌಲ್ಯಮಾಪಕರ ಶುಲ್ಕ | 10,500.00 | 10,500.00 |
| | ಕಾನೂನು ಸಲಹೆಗಾರರ ಶುಲ್ಕ | 11,000.00 | 11,000.00 |
| | ಯಶಸ್ವಿನ ಆರೋಗ್ಯ ವಿಮೆ | 37,720.00 | 37,720.00 |
| | ಸಿಬ್ಬಂದಿ ಭದ್ರತಾ ಠೇವಣಿ | 23,423.00 | |
| | ಭದ್ರತಾ ಠೇವಣಿ | 4,35,016.00 | 1,15,000.00 |
| | | | |
| 7 | **ಠೇವಣಾತಿಗಳು(ಜವಬ್ದಾರಿ)** | 24,18,29,093.60 | 22,65,34,085.30 |
| | ಉಳಿತಾಯ ಖಾತೆ | 17,22,16,173.60 | 16,57,78,149.30 |
| | ನಿಶ್ಚಿತ ಠೇವಣಿ | 3,11,53,500.00 | 2,35,74,000.00 |
| | ಸಂಚಿತ ಠೇವಣಿ | 42,59,691.00 | 27,16,994.00 |
| | ನಿತ್ಯನಿಧಿ ಠೇವಣಿ | 3,41,49,729.00 | 3,43,34,942.00 |
| | ಅಕ್ಷಯ ನಿತ್ಯನಿಧಿ ಯೋಜನಾ ಠೇವಣಿ | 50,000.00 | 1.30,000.00 |
| | | | |
| 8 | **ಸದಸ್ಯರ ಸಾಲಗಳು** | 3,36,62,046.00 | 3,78,82,700.00 |
| | ಸಿಬ್ಬಂದಿ ಸಾಲ | 3,65,016.00 | 8,00,000.00 |
| | ಜಾಮೀನು ಸಾಲ | 15,91,444.00 | 9,00,000.00 |
| | ಎಲ್.ಐ.ಸಿ/ಎನ್.ಎಸ್.ಸಿ/ಕೆ.ವಿ.ಪಿ ಸಾಲ | 1,11,659.00 | – |
| | ಠೇವಣಿ ಮೇಲಿನ ಸಾಲ | 44,73,131.00 | 42,08,200.00 |
| | ಆಸ್ತಿ ಆಧಾರಿತ ಸಾಲ | 35,23,068.00 | 85,50,000.00 |
| | ಆಭರಣ ಸಾಲ | 2,35,97,728.00 | 2,34,24,500.00 |
| | | | |
| 9 | **ಅಮಾನತ್ತು ಜವಾಬ್ಧಾರಿ** | 3,63,11,881.00 | 3,66,10,379.00 |
| | ಅಮಾನತ್ತು ಖಾತೆ | 1,64,450.00 | 4,65,668.00 |
| | ಡಿಡಿ ಅಮಾನತ್ತು | 19,95,302.00 | 19,92,582.00 |
| | ನಿತ್ಯನಿಧಿ ಅಮಾನತ್ತು | 3,41,52,129.00 | 3,41,52,129.00 |
| | | | |
| 10 | **ಚರಾಸ್ತಿಗಳು** | | 7,53,018.00 |
| | ವಿದ್ಯುತ್ ಉಪಕರಣಗಳು | | 1,23,350.00 |

| ಕ್ರ.ಸಂ. | ವಿವರಗಳು | ಜಮಾ | ಖರ್ಚು |
|---|---|---|---|
| | ಹಾರೋಹಳ್ಳಿ ಕಂಪ್ಯೂಟರ್ ಸಾಫ್ಟ್‌ವೇರ್ | | 1,82,900.00 |
| | ಹಾರೋಹಳ್ಳಿ ವಿದ್ಯುತ್ ಉಪಕರಣ | | 1,32,570.00 |
| | ಹಾರೋಹಳ್ಳಿ ಪೀಠೋಪಕರಣಗಳು | | 1,28,430.00 |
| | ಪೀಠೋಪಕರಣ | | 340.00 |
| | ಗಣಕಯಂತ್ರಗಳು | | 1,85,428.00 |
| | | | |
| 11 | ಇತರೆ ಬರತಕ್ಕವುಗಳು | 4,04,200.00 | 4,31,717.00 |
| | ಮುಂಗಡಗಳು | 3,88,900.00 | 3,88,500.00 |
| | ಚಿನ್ನಾಭರಣ ಹರಾಜು ಮುಂಗಡಗಳು | 10,000.00 | 10,000.00 |
| | **ದಾವಾ ಶುಲ್ಕ** | 5,300.00 | 33,217.00 |
| | | | |
| 12 | ಹಾರೋಹಳ್ಳಿ ಶಾಖಾ ಮುಂಗಡಗಳು | 1,79,430.00 | 11,59,232.00 |
| | ಮುಂಗಡಗಳು | 1,79,430.00 | 5,59,232.00 |
| | ಕಛೇರಿ ಮುಂಗಡಗಳು | | 6,00,000.00 |
| | | – | – |
| 13 | ಅಮಾನತ್ತು ಮೂಲ | 96,000.00 | – |
| | ಬ್ಯಾಂಕ್ ಟಿ.ಡಿ.ಎಸ್ | 96,000.00 | |
| | | | – |
| 14 | ಇತರೆ ಆದಾಯಗಳು | 5,86,538.66 | – |
| | ಖಾತಾ ನಿರ್ವಹಣ ವೆಚ್ಚ | 4,91,950.00 | – |
| | ಅರ್ಜಿ ಶುಲ್ಕ | 10,810.00 | – |
| | ಪ್ರವೇಶ ಧನ | 2,250.00 | – |
| | ಸಾಲದ ಸಂಸ್ಕರಣ ಶುಲ್ಕ | 40,000.00 | – |
| | ಇತರೆ ಜಮಾ | 11,750.00 | – |
| | ಷೇರು ಶುಲ್ಕ | 7,050.00 | – |
| | ನಾಮಮಾತ್ರ ಸದಸ್ಯತ್ವ | 9,150.0 | – |
| | ಡಿಡಿ ಶುಲ್ಕ | 10,299.00 | – |
| | ಇ–ಸ್ಟಾಂಪ್ ಕಮಿಷನ್ ಮತ್ತು ಸೇವಾ ಶುಲ್ಕ | 3,279.66 | |
| | | | |
| 15 | ಸಿಬ್ಬಂದಿ ವೆಚ್ಚಗಳು | – | 16,70,230.00 |
| | ಸಿಬ್ಬಂದಿ ಸಂಬಳ | – | 16,24,002.00 |
| | | | |

| ಕ್ರ.ಸಂ. | ವಿವರಗಳು | ಜಮಾ | ಖರ್ಚು |
|---|---|---|---|
| | ಸಿಬ್ಬಂದಿ ಯೋಗಕ್ಷೇಮ ವೆಚ್ಚಗಳು | | 3,773.00 |
| | ಭವಿಷ್ಯ ನಿಧಿ ಸಂಘದ ವಂತಿಕೆ | – | 42,455.00 |
| | | – | |
| 16 | <u>ಆಡಳಿತಾತ್ಮಕ ಖರ್ಚುಗಳು</u> | 236.00 | 10,48,958.30 |
| | ಆಭರಣಗಳ ಮರುಮೌಲ್ಯಮಾಪನ ವೆಚ್ಚ | | 10,880.00 |
| | ಲೆಕ್ಕ ಪರಿಶೋಧನಾ ಶುಲ್ಕ | | 1,03,340.00 |
| | ಆಡಳಿತ ವೆಚ್ಚಗಳು | – | 27,689.00 |
| | ಬ್ಯಾಂಕ್ ವೆಚ್ಚ | 236.00 | 947.30 |
| | ವಾರ್ಷಿಕ ನಿರ್ವಹಣಾ ಒಪ್ಪಂದ ವೆಚ್ಚ | | 22,420.00 |
| | ಕಂಪ್ಯೂಟರ್ ನಿರ್ವಹಣಾ ವೆಚ್ಚ | | 15,584.00 |
| | ವಕೀಲರ ವೆಚ್ಚ | | 47,600.00 |
| | ಲೇಖನ ಸಾಮಾಗ್ರಿ ವೆಚ್ಚ | | 73,722.00 |
| | ವಾರ್ಷಿಕ ಮಹಾಸಭೆ ವೆಚ್ಚ | | 1,89,780.00 |
| | ಅಂಚೆ ವೆಚ್ಚ | | 525.00 |
| | ವಿದ್ಯುತ್ ಖರ್ಚು | | 48,165.00 |
| | ಮುದ್ರಣಾ ವೆಚ್ಚ | | 33,400.00 |
| | ಬಾಡಿಗೆ ವೆಚ್ಚ | | 2,74,000.00 |
| | ಪ್ರಯಾಣ ಭತ್ಯೆ | | 62,169.00 |
| | ದೂರವಾಣಿ ವೆಚ್ಚ | | 25,237.00 |
| | ಭದ್ರತಾ ವೆಚ್ಚ | | 1,13,500.00 |
| | | | |
| 17 | <u>ಇತರೆ ಜಮಾ ಮತ್ತು ಖರ್ಚುಗಳು</u> | 6,65,343.50 | 19,88,589.28 |
| | ರಾಷ್ಟ್ರೀಯ ಹಬ್ಬಗಳ ವೆಚ್ಚ | | 3,046.00 |
| | ಇತರೆ ಖರ್ಚುಗಳು | | 1,682.00 |
| | ಪ್ರೋತ್ಸಾಹ ವೆಚ್ಚ | | 50,815.00 |
| | ವಸೂಲಾತಿ ವೆಚ್ಚ | 21,050.00 | 20,790.00 |
| | ನೋಟೀಸು ವೆಚ್ಚ | 3,510.00 | 250.00 |
| | ವಿಮೆ | 1,17,122.00 | 51,671.00 |
| | ಸೇವಾ ಶುಲ್ಕ | 5,23,661.50 | 328.00 |
| | ಗೌರವ ಧನ | | 3,74,000.00 |
| | ಎಸ್. ಎಂ.ಎಸ್. ಶುಲ್ಕ | | 17,700.00 |
| | ವೃತ್ತಿ ಶುಲ್ಕ | | 8,000.00 |
| | ಇ– ಸ್ಟಾಂಪ್ ವೆಚ್ಚ | | 86.28 |
| | ಮನ್ನಾಮಾಡು | | 16,148.00 |
| | ಅತಿಥಿ ಸತ್ಕಾರ ವೆಚ್ಚ | | 3,742.00 |

| ಕ್ರ.ಸಂ. | ವಿವರಗಳು | ಜಮಾ | ಖರ್ಚು |
|---|---|---|---|
| | ಕಾನೂನು ವೆಚ್ಚ | | 9,000.00 |
| | ಲಾಕರ್ ಬಾಡಿಗೆ | | 600.00 |
| | ಕಛೇರಿ ನಿರ್ವಹಣಾ ವೆಚ್ಚ | | 73,659.00 |
| | ಕಛೇರಿ ವಾಹನ ನಿರ್ವಹಣಾ ವೆಚ್ಚ | | 5,661.00 |
| | ವೃತ್ತಿ ಪತ್ರಿಕೆ ವೆಚ್ಚ | | 3,885.00 |
| | ಪಿಗ್ಮಿ ಏಜೆಂಟ್ ಕಮಿಷನ್) | | 10,25,700.00 |
| | ಪೂಜಾ ವೆಚ್ಚ | | 15,773.00 |
| | ದುರಸ್ತಿ ಮತ್ತು ನಿರ್ವಹಣಾ ವೆಚ್ಚ | | 8,550.00 |
| | ಕಂದಾಯ ವೆಚ್ಚ | | 1,990.00 |
| | ಸವಕಳಿ | | 2,95,513.00 |
| | | | |
| 18 | <u>ಬಡ್ಡಿ (ಖರ್ಚು)</u> | | 49,48,541.00 |
| | ಠೇವಣಿಗಳ ಮೇಲಿನ ಬಡ್ಡಿ | | 49,48,541.00 |
| | | | |
| 19 | <u>ಬಡ್ಡಿ(ಆದಾಯಗಳು)</u> | 62,61,960.00 | |
| | ಸಾಲಗಳ ಮೇಲಿನ ಬಡ್ಡಿ | 47,13,698.00 | |
| | ಠೇವಣಿಗಳ ಮೇಲಿನ ಬಡ್ಡಿ | 9,96,328.00 | |
| | ಹೂಡಿಕೆಗಳ ಮೇಲಿನ ಬಡ್ಡಿ | 5,51,934.00 | |
| | | | |
| 20 | <u>ಅವಕಾಶಗಳು</u> | 10,42,333.00 | 10,29,806.00 |
| | ಲೆಕ್ಕಪರಿಶೋಧನಾ ಶುಲ್ಕ 2022–23 | 1,03,340.00 | 94,800.00 |
| | ಅಕ್ಷಯ ನಿಧಿ ಯೋಜನೆ ಮೇಲೆ ಬಡ್ಡಿ ಕಾದಿರಿಸಿದ್ದು | 23,754.00 | 35,534.00 |
| | ನಿತ್ಯನಿಧಿ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 2,17,596.00 | 2,21,395.00 |
| | ನಿಶ್ಚಿತ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 1,89,317.00 | 3,24,021.00 |
| | ರಿಕರಿಂಗ್ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 5,08.326.00 | 3,54,056.00 |
| | | | |
| | **ಒಟ್ಟು ಜಮಾ ಮತ್ತು ಖರ್ಚು** | 36,42,21,757.34 | 36,43,75,250.34 |
| | **ಪ್ರಾರಂಭಿಕ ಮತ್ತು ಅಂತಿಮ ಶಿಲ್ಕು** | 61,4,754.00 | 4,61,261.00 |
| | **ಒಟ್ಟು ಜುಮ್ಲಾ** | 36,48,36,511.34 | 36,48,36,511.34 |

**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ಅಧ್ಯಕ್ಷರು**

**ದೃಢೀಕರಣ**

**( ಜೆ ಬಿ ಶಿಲ್ಪ & ಕಂಪನಿ)**

**ಚಾರ್ಟರ್ಡ್ ಅಕೌಂಟೆಟ್**

# ಸರ್.ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಕನಕಪುರ

## ದಿನಾಂಕ: 1-4-2022 ರಿಂದ 31-3-2023ರ ವರೆಗಿನ ಲಾಭ-ನಷ್ಟ ತ:ಖ್ತೆ

| ಕ್ರ.ಸಂ. | ಖರ್ಚಿನ ವಿವರ | ಮೊಬಲಗು | ಮೊಬಲಗು | ಕ್ರ.ಸಂ. | ಆದಾಯದ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| 1. | **ಆಡಳಿತಾತ್ಮಕ ವೆಚ್ಚಗಳು** | | 9,45,618.30 | 1. | **ಇತರೇ ಜಮಾ/ಖರ್ಚು** | | 12,29,389.50 |
| | ಆಭರಣಗಳ ಮರುಮೌಲ್ಯಮಾಪನ ವೆಚ್ಚ | 10,880.00 | | | ಖಾತಾ ನಿರ್ವಹಣಾ ವೆಚ್ಚ | 4,91,950.00 | |
| | ಆಡಳಿತ ವೆಚ್ಚಗಳು | 27,689.00 | | | ವಸೂಲಾತಿ ವೆಚ್ಚ | 21,050.00 | |
| | ಬ್ಯಾಂಕ್ ವೆಚ್ಚ | 947.30 | | | ನೋಟಿಸು ವೆಚ್ಚ | 3,510.00 | |
| | ವಾರ್ಷಿಕ ನಿರ್ವಹಣಾ ಒಪ್ಪಂದ ವೆಚ್ಚ | 22,420.00 | | | ಬ್ಯಾಂಕ್ ವೆಚ್ಚ | 236.00 | |
| | ಕಂಪ್ಯೂಟರ್ ನಿರ್ವಹಣಾ ವೆಚ್ಚ | 15,584.00 | | | ಅರ್ಜಿ ಶುಲ್ಕ | 10,810.00 | |
| | ವಕೀಲರ ವೆಚ್ಚ | 47,600.00 | | | ಪ್ರವೇಶ ಧನ | 2,250.00 | |
| | ಲೇಖನ ಸಾಮಾಗ್ರಿ ವೆಚ್ಚ | 73,722.00 | | | ವಿಮೆ | 1,17,122.00 | |
| | ವಾರ್ಷಿಕ ಮಹಾಸಭೆ ವೆಚ್ಚ | 1,89,780.00 | | | ಸಾಲದ ಸಂಸ್ಕರಣ ಶುಲ್ಕ | 40,000.00 | |
| | ಅಂಚೆ ವೆಚ್ಚ | 525.00 | | | ಇತರೆ ಜಮಾ | 11,750.00 | |
| | ವಿದ್ಯುತ್ ಖರ್ಚು | 48,165.00 | | | ಸೇವಾ ಶುಲ್ಕ | 5,23,661.50 | |
| | ಮುದ್ರಣಾ ವೆಚ್ಚ | 33,400.00 | | | ಷೇರು ಶುಲ್ಕ | 7,050.00 | |
| | ಬಾಡಿಗೆ ವೆಚ್ಚ | 2,74,000.00 | | 2. | **ಇತರ ಆದಾಯಗಳು** | | 22,728.66 |
| | **ಪ್ರಯಾಣ ಭತ್ಯೆ** | 62,169.00 | | | ನಾಮಮಾತ್ರ ಸದಸ್ಯತ್ವ | 9,150.00 | |
| | ದೂರವಾಣಿ ವೆಚ್ಚ | 25,237.00 | | | ಡಿ ಡಿ ಶುಲ್ಕ | 10,299.00 | |
| | ಭದ್ರತಾ ವೆಚ್ಚ | 1,13,500.00 | | | ಇ-ಸ್ಟಾಂಪ್ ಕಮಿಷನ್ ಮತ್ತು ಸೇವಾ ಶುಲ್ಕ | 3,279.66 | |
| 2. | ಸಿಬ್ಬಂದಿ ವೆಚ್ಚಗಳು | | 16,70,230.00 | 3 | **ಬಡ್ಡಿ (ಆದಾಯಗಳು)** | | 62,61,960.00 |
| | ಸಿಬ್ಬಂದಿ ಸಂಬಳ | 16,24,002.00 | | | ಸಾಲಗಳ ಮೇಲಿನ ಬಡ್ಡಿ | 47,13,698.00 | |
| | ಸಿಬ್ಬಂದಿ ಯೋಗಕ್ಷೇಮ | 3,773.00 | | | ಹೂಡಿಕೆಗಳ ಮೇಲಿನ ಬಡ್ಡಿ | 5,51,934.00 | |
| | ಭವಿಷ್ಯ ನಿಧಿ(ಸಂಘದ ವಂತಿಕೆ) | 42,455.00 | | | ಠೇವಣಿಗಳ ಮೇಲೆ ಬಂದ ಆದಾಯ | 9,96,328.00 | |
| 3 | ಇತರೆ ವೆಚ್ಚಗಳು | | 16,93,076.28 | | | | |
| | ರಾಷ್ಟ್ರೀಯ ಹಬ್ಬಗಳ ವೆಚ್ಚ | 3,046.00 | | | | | |

| ಕ್ರ.ಸಂ. | ಖರ್ಚಿನ ವಿವರ | ಮೊಬಲಗು | ಮೊಬಲಗು | ಕ್ರ.ಸಂ. | ಆದಾಯದ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| | ಇತರೆ ಖರ್ಚುಗಳು | 1,682.00 | | | | | |
| | ಪ್ರೋತ್ಸಾಹ ವೆಚ್ಚ | 50,815.00 | | | | | |
| | ವಸೂಲಾತಿ ವೆಚ್ಚ | 20,790.00 | | | | | |
| | ನೋಟೀಸು ವೆಚ್ಚ | 250.00 | | | | | |
| | ವಿಮೆ | 51,671.00 | | | | | |
| | ಸೇವಾಶುಲ್ಕ | 328.00 | | | | | |
| | ಗೌರವ ಧನ | 3,74,000.00 | | | | | |
| | ಎಸ್.ಎಂ.ಎಸ್. ಶುಲ್ಕ | 17,700.00 | | | | | |
| | ವೃತ್ತಿ ಶುಲ್ಕ | 8,000.00 | | | | | |
| | ಇ–ಸ್ಟಾಂಪ್ ವೆಚ್ಚ | 86.28 | | | | | |
| | ಮನ್ನಾ ಮಾಡು | 16,148.00 | | | | | |
| | ಅತಿಥಿ ಸತ್ಕಾರ ವೆಚ್ಚ | 3,742.00 | | | | | |
| | ಕಾನೂನು ವೆಚ್ಚ | 9,000.00 | | | | | |
| | ಲಾಕರ್ ಬಾಡಿಗೆ | 600.00 | | | | | |
| | ಕಛೇರಿ ನಿರ್ವಹಣಾ ವೆಚ್ಚ | 73,659.00 | | | | | |
| | ಕಛೇರಿ ವಾಹನ ನಿರ್ವಹಣೆ ವೆಚ್ಚ | 5,661.00 | | | | | |
| | ವೃತ್ತ ಪತ್ರಿಕೆ ವೆಚ್ಚ | 3,885.00 | | | | | |
| | ಪಿಗ್ಮಿ ಎಜೆಂಟ್ ಕಮಿಷನ್ | 10,25,700.00 | | | | | |
| | ಪೂಜ ಖರ್ಚು | 15,773.00 | | | | | |
| | ದುರಸ್ತಿ ಮತ್ತು ನಿರ್ವಹಣಾ ವೆಚ್ಚ | 8,550.00 | | | | | |
| | ಕಂದಾಯ ವೆಚ್ಚ | 1,990.00 | | | | | |
| | | | | | | | |

| ಕ್ರ.ಸಂ. | ಖರ್ಚಿನ ವಿವರ | ಮೊಬಲಗು | ಮೊಬಲಗು | ಕ್ರ.ಸಂ. | ಆದಾಯದ ವಿವರ | ಮೊಬಲಗು | ಮೊಬಲಗು |
|---|---|---|---|---|---|---|---|
| | ಬಡ್ಡಿ(ಖರ್ಚು) | | 49,42,541.00 | 4. | **ಲಾಭ ಮತ್ತು ನಷ್ಟದ ತಖ್ತೆ:** | | |
| | ಠೇವಣಿಗಳ ಮೇಲಿನ ಬಡ್ಡಿ ಕೊಟ್ಟದ್ದು | 49,42,541.00 | | | **2022-23ನೇ ಸಾಲಿನ ಲಾಭ ಮತ್ತು ನಷ್ಟ** | | 30,75,233.42 |
| 5 | ಅವಕಾಶಗಳು | | 13,37,846.00 | | | | |
| | ಸವಕಳಿ ಖಾತೆ | 2,95,513.00 | | | | | |
| | ನಿತ್ಯನಿಧಿ ಠೇವಣಿ ಮೇಲೆ ಬಡ್ಡಿ ಕಾಯ್ದಿರಿಸಿದ್ದು | 2,17,596.00 | | | | | |
| | ಅಕ್ಷಯ ನಿಧಿ ಯೋಜನೆ ಮೇಲೆ ಬಡ್ಡಿ | 23,754.00 | | | | | |
| | ಲೆಕ್ಕ ಪರಿಶೋದನಾ ಶುಲ್ಕ ಕಾದಿರಿಸಿದ್ದು | 1,03,340.00 | | | | | |
| | ನಿಶ್ಚಿತ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 1,89,317.00 | | | | | |
| | ರಿಕರಿಂಗ್ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 5,08,326.00 | | | | | |
| | | | | | | | |
| | ಒಟ್ಟು ಜುಮ್ಲಾ | | 1,05,89,311.58 | | ಒಟ್ಟು ಜುಮ್ಲಾ | | 1,05,89,311.58 |



ಅಧ್ಯಕ್ಷರು

ದೃಢೀಕರಣ
(ಜೆ ಬಿ ಶಿಲ್ಪ & ಕಂಪನಿ)
ಚಾರ್ಟರ್ಡ್ ಅಕೌಂಟೆಟ್

ಮುಖ್ಯ ಕಾರ್ಯನಿರ್ವಹಣಾಧಿಕಾರಿ

# ಸರ್.ಎಂ. ವಿಶ್ವೇಶ್ವರಾಯ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಕನಕಪುರ

## ದಿನಾಂಕ: 31-3-2023ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತ:ಖ್ತೆ

| ಕ್ರ.ಸಂ. | ಜವಾಬ್ದಾರಿಗಳು | ಮೊಬಲಗು | ಮೊಬಲಗು | ಕ್ರ.ಸಂ. | ಆಸ್ತಿಗಳು | ಮೊಬಲಗು | ಮೊಬಲಗು |
|---|---|---|---|---|---|---|---|
| 1. | **ಷೇರು ಬಂಡವಾಳ** | | 34,98,100.00 | 1. | **ನಗದು ಶಿಲ್ಕು** | | 4,61,261.00 |
| | ಸದಸ್ಯರ ಪಾಲು ಹಣ | 34,98,100.00 | | | | | |
| 2. | **ನಿಧಿಗಳು** | | 99,29,678.00 | 2. | **ಬ್ಯಾಂಕ್ ಖಾತೆಗಳು** | | 76,13,719.95 |
| | ಕರಡು ಸಂಶಯಾಸ್ಪದ ಸಾಲದ ನಿದಿ | 1,27,966.00 | | | ಅರ್ಬನ್ ಕೋ. ಆಪರೇಟೀವ್ ಸೊಸೈಟಿ ಉಳಿತಾಯ ಖಾತೆ | 23,97,791.00 | |
| | ಕಟ್ಟಡ ನಿಧಿ | 17,79,989.00 | | | ಐ.ಡಿ.ಬಿ.ಐ ಬ್ಯಾಂಕ್ ಚಾಲ್ತಿ ಖಾತೆ | 26,61,168.80 | |
| | ದರ್ಮಾರ್ಥ ನಿಧಿ | 4,36,871.00 | | | ಬಿ.ಬಿ.ಆರ್ ಮತ್ತು ಆರ್. ಡಿ.ಸಿ.ಸಿ ಬ್ಯಾಂಕ್ ಚಾಲ್ತಿ ಖಾತೆ | 21,54,734.98 | |
| | ಜುಬಿಲಿ ನಿಧಿ | 9,95,278.00 | | | ಎಸ್. ಬಿ.ಐ ಚಾಲ್ತಿ ಖಾತೆ | 2,91,943.08 | |
| | ಲಾಭಾಂಶ ಸಮೀಕರಣ ನಿಧಿ | 1,93,152.00 | | | ಬ್ಯಾಂಕ್ ಆಫ್ ಬರೋಡ ಚಾಲ್ತಿ ಖಾತೆ | 62,142.49 | |
| | ಅಪದ್ದನ ನಿಧಿ | 56,29,014.00 | | | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಖಾತೆ | 45,939.60 | |
| | ಕ್ಷೇಮನಿಧಿ | 7,67,408.00 | | 3 | **ಹೂಡಿಕೆಗಳು** | | 5,45,366.00 |
| 3. | **ಸವಕಳಿ ನಿಧಿ** | | 26,85,390.00 | | ಅರ್ಬನ್ ಕೋ.ಆಪರೇಟೀವ್ ಸೊಸೈಟಿ ಲಾಕರ್ ಠೇವಣಿ | 5,000.00 | |
| | ಕಬ್ಬಿಣದ ಉಪಕರಣಗಳ ಸವಕಳಿ ನಿಧಿ | 2,33,852.00 | | | ಭದ್ರತಾ ಠೇವಣಿ ಕ.ಸ್ಟೇ.ಕೋ.ಆ.ಕೆ.ಸೊ.ಪ್ರೈ.ಲಿ | 50,000.00 | |
| | ಕಂಪ್ಯೂಟರ್ ಸವಕಳಿ ನಿಧಿ | 10,22,750.00 | | | ಸಿಬ್ಬಂದಿ ಭವಿಷ್ಯ ನಿಧಿ ಅಂಚೆ ಕಛೇರಿ | 4,90,366.00 | |
| | ವಿದ್ಯುದ್ದೀಪಕರಣ ಸವಕಳಿ ನಿಧಿ | 5,98,296.00 | | 4 | **ಷೇರುಗಳಲ್ಲಿ ಹೂಡಿಕೆಗಳು** | | 1,25,41,600.00 |
| | ಪೀಠೋಪಕರಣ ಸವಕಳಿ ನಿಧಿ | 7,64,371.00 | | | ಕರ್ನಾಡಕ ರಾಜ್ಯ ಕೋ-ಆಪರೇಟೀವ್ ಸೊಸೈಟಿ(ರಿ)ಸದಸ್ಯತ್ವ | 11,100.00 | |
| | ದ್ವಿಚಕ್ರ ವಾಹನ ಸವಕಳಿ ನಿಧಿ | 66,121.00 | | | ಬಿಬಿಆರ್ ಮತ್ತು ಆರ್‌ಡಿಸಿಸಿ ಬ್ಯಾಂಕ್ ಸದಸ್ಯತ್ವ ನೊಂದಣಿ | 25,000.00 | |
| 4. | **ಠೇವಣಾತಿಗಳು(ಜವಾಬ್ದಾರಿ)** | | 9,02,65,841.79 | | ಕ.ರಾ.ಸ.ಪ.ಮ ಮಂಡಳಿ ಸದಸ್ಯತ್ವ ನೊಂದಣಿ | 5,500.00 | |
| | ಉಳಿತಾಯ ಖಾತೆ | 261,11,595.79 | | | ಬಿ.ಡಿ.ಸಿ.ಸಿ ಬ್ಯಾಂಕ್ ನಿಶ್ಚಿತ ಠೇವಣಿ | 30,00,000.00 | |
| | ನಿಶ್ಚಿತ ಠೇವಣಿ | 4,78,79,599.00 | | | ಅರ್ಬನ್ ಕೋ. ಆಪರೇಟಿವ್ ಸೊಸೈಟಿ ನಿಶ್ಚಿತ ಠೇವಣಿ | 95,00,000.00 | |
| | ಅಕ್ಷಯ ನಿಧಿ ಯೋಜನೆ | 2,96,483.00 | | 5 | **ಠೇವಣಾತಿ ಹೂಡಿಕೆಗಳು** | | |
| | ಚಾಲ್ತಿ ಖಾತೆ | 52.00 | | | ಬಿಬಿಆರ್ ಮತ್ತು ಆರ್.ಡಿ.ಸಿ.ಸಿ ಬ್ಯಾಂಕ್ ಖಾಯಂ ಖಾತೆ | 16,37,541.00 | 16,37,541.00 |
| | ಸಂಚಿತ ಠೇವಣಿ | 50,83,257.00 | | | | | |

| ಕ್ರ.ಸಂ. | ಜವಾಬ್ದಾರಿಗಳು | ಮೊಬಲಗು | ಮೊಬಲಗು | ಕ್ರ.ಸಂ. | ಆಸ್ತಿಗಳು | ಮೊಬಲಗು | ಮೊಬಲಗು |
|---|---|---|---|---|---|---|---|
| | ನಿತ್ಯನಿಧಿ ಠೇವಣಿ | 1,08,79,815.00 | | 6 | **ಸದಸ್ಯರ ಸಾಲಗಳು** | | 6,32,17,327.47 |
| | ಎಲ್.ಐ.ಸಿ ಠೇವಣಿ(ನಿತ್ಯನಿಧಿ)(ಹಿಂದಿನಂತೆ) | 15,040.00 | | | ಎಲ್.ಐ.ಸಿ/ಎನ್.ಎಸ್.ಸಿ/ಕೆ.ವಿ.ಪಿ ಸಾಲ | | |
| 5 | **ಅಮಾನತು ಜವಾಬ್ದಾರಿ** | | 18,58,369.35 | | ಸಿಬ್ಬಂದಿ ಸಾಲ | 7,99,453.00 | |
| | ಅಮಾನತ್ತು ಖಾತೆ | 16,73,768.00 | | | ಜಾಮೀನು ಸಾಲ | 8,56,095.00 | |
| | ಮುನಿಗಂಗಯ್ಯ ಅಮಾನತ್ತು ಖಾತೆ(ಹಿಂದಿನಂತೆ) | 1,00,000.00 | | | ಠೇವಣಿ ಮೇಲೆ ಸಾಲ | 9,31,687.00 | |
| | ಡಿ.ಡಿ. ಅಮಾನತ್ತು | 78,945.00 | | | ಆಸ್ತಿ ಆಧಾರಿತ ಸಾಲ | 1,66,75,327.00 | |
| | ಸಾಲದ ಅಮಾನತ್ತು ಖಾತೆ(ಹಿಂದಿನಂತೆ) | 5,656.35 | | | ಎ ಎಸ್.ಎಲ್.ಒಡಿ ಸಾಲ | 4,34,455.00 | |
| 6 | **ಇತರೆ ಜವಾಬ್ದಾರಿಗಳು** | | 22,73,508.00 | | ಆಭರಣ ಸಾಲ | 1,86,70,102.00 | |
| | ಟಿ ಡಿ ಎಸ್ | 521.00 | | | ವಾಹನ ಸಾಲ | 23,151.00 | |
| | ಸಹಕಾರ ಶಿಕ್ಷಣ ನಿಧಿ(ಹಿಂದಿನಂತೆ) | 64,102.00 | | | ಸಂಬಳ ಆಧಾರಿತ ಸಾಲ | 10,57,591.00 | |
| | ಸಿಬ್ಬಂದಿ ಭವಿಷ್ಯ ನಿಧಿ | 4,90,366.00 | | | ಇತರೆ ಸಾಲಗಳು(ಹಿಂದಿನಂತೆ) | 2,37,69,466.47 | |
| | ಸಿಬ್ಬಂದಿ ಭದ್ರತಾ ಠೇವಣಿ | 6,22,934.00 | | 7 | **ಕನಕಪುರ ಕೇಂದ್ರ ಶಾಖಾ ಸ್ಥಿರಾಸ್ತಿಗಳು** | | 51,96,037.00 |
| | ಭದ್ರತಾ ಠೇವಣಿ | 10,95,585.00 | | | ಕಟ್ಟಡ ನಿವೇಶನ | 51,96,037.00 | |
| 7 | **ಕಾದಿರಿಸಿದ್ದು** | | 10,42,333.00 | 8 | **ಕನಕಪುರ ಕೇಂದ್ರ ಶಾಖಾ ಚರಾಸ್ತಿಗಳು** | | 40,97,928.00 |
| | ಅಕ್ಷಯ ನಿಧಿ ಯೋಜನೆ ಮೇಲೆ ಬಡ್ಡಿ ಕಾದಿರಿಸಿದ್ದು | 23,754.00 | | | ವಿದ್ಯುತ್ ಉಪಕರಣಗಳು | 10,23,574.00 | |
| | ನಿತ್ಯನಿಧಿ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 2,17,596.00 | | | ಕಬ್ಬಿಣದ ಉಪಕರಣಗಳು | 3,80,941.00 | |
| | ಲೆಕ್ಕಪರಿಶೋದನಾ ಶುಲ್ಕ ಕಾದಿರಿಸಿದ್ದು | 1,03,340.00 | | | ಪೀಠೋಪಕರಣಗಳು | 12,09,192.00 | |
| | ನಿಶ್ಚಿತ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 1,89,317.00 | | | ಗಣಕಯಂತ್ರ ಮತ್ತು ಸಾಫ್ಟ್‌ವೇರ್ | 13,22,093.00 | |
| | ರಿಕರಿಂಗ್ ಠೇವಣಿ ಮೇಲೆ ಬಡ್ಡಿ ಕಾದಿರಿಸಿದ್ದು | 5,08,326.00 | | | ವಾಹನ | 1,62,128.00 | |
| | | | | 9 | **ಹಾರೋಹಳ್ಳಿ ಶಾಖಾ ಚರಾಸ್ತಿಗಳು** | | 4,43,900.00 |
| | | | | | ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್ | 1,82,.900.00 | |
| | | | | | ವಿದ್ಯುತ್ ಉಪಕರಣಗಳು | 1,32,570.00 | |
| | | | | | ಪೀಠೋಪಕರಣಗಳು | 1,28,430.00 | |
| | | | | | | | |

| ಕ್ರ.ಸಂ. | ಜವಾಬ್ದಾರಿಗಳು | ಮೊಬಲಗು | ಮೊಬಲಗು | ಕ್ರ.ಸಂ. | ಆಸ್ತಿಗಳು | ಮೊಬಲಗು | ಮೊಬಲಗು |
|---|---|---|---|---|---|---|---|
| | | | | 10. | **ಇತರೆ ಆಸ್ತಿಗಳು** | | **3,23,107.92** |
| | | | | | ದಾವಾಶುಲ್ಕ | **76,145.00** | |
| | | | | | ಇ-ಸ್ಟಾಂಪಿಂಗ್ ಕರೆನ್ಸಿ | **46,962.92** | |
| | | | | | ಕಛೇರಿ ಕಟ್ಟಡ ಮುಂಗಡ | **2,00,000.00** | |
| | | | | 11 | **ಹಾರೋಹಳ್ಳಿ ಶಾಖಾ ಮುಂಗಡಗಳು** | | **9,79,802.00** |
| | | | | | ಹಾರೋಹಳ್ಳಿ ಶಾಖಾ ಇತರೆ ಮುಂಗಡಗಳು | **3,79,802.00** | |
| | | | | | ಹಾರೋಹಳ್ಳಿ ಶಾಖಾ ಕಛೇರಿ ಮುಂಗಡಗಳು | **6,00,000.00** | |
| | | | | 12 | **ಲಾಭ ಮತ್ತು ನಷ್ಟದ ಲೆಕ್ಕ** | | **1,43,85,766.80** |
| | | | | | ಹಿಂದಿನ ಸಾಲಿನಂತೆ ಲಾಭ ಮತ್ತು ನಷ್ಟದ ಖಾತೆ | **1,14,20,396.38** | |
| | | | | | ಲಾಭ ಮತ್ತು ನಷ್ಟದ ಖಾತೆ 2022-23 | **30,75,233.42** | |
| | ಒಟ್ಟು ಜುಮ್ಲಾ | | **11,15,53,220.14** | | ಒಟ್ಟು ಜುಮ್ಲಾ | | **11,15,53,220.14** |

**ಅಧ್ಯಕ್ಷರು** **ಮುಖ್ಯ ಕಾರ್ಯನಿರ್ವಹಣಾಧಿಕಾರಿ**

**ದೃಢೀಕರಣ**

(ಜೆ ಬಿ ಶಿಲ್ಪ & ಕಂಪನಿ)
**ಚಾರ್ಟರ್ಡ್ ಅಕೌಂಟೆಟ್**

# –: ಠೇವಣಿಗಳ ಮೇಲಿನ ಬಡ್ಡಿದರಗಳು :–

## ನಿಶ್ಚಿತ ಠೇವಣಿ (ಎಫ್.ಡಿ)

| | | |
|---|---|---|
| 45 ದಿನಕ್ಕೆ | – | ಶೇ. 5% |
| 3 ತಿಂಗಳಿಗೆ | – | ಶೇ. 6% |
| 6 ತಿಂಗಳಿಗೆ | – | ಶೇ. 6.5% |
| 1 ವರ್ಷಕ್ಕೆ | – | ಶೇ. 7.25% |
| 2 ವರ್ಷಕ್ಕೆ | – | ಶೇ. 7.75% |
| 3 ವರ್ಷಕ್ಕೆ | – | ಶೇ. 8.25% |

## ಸಂಚಿತ ಠೇವಣಿ (ಆರ್.ಡಿ)

| | | |
|---|---|---|
| 1 ವರ್ಷಕ್ಕೆ | – | ಶೇ. 9% |
| 2 ವರ್ಷಕ್ಕೆ | – | ಶೇ. 10% |
| 3 ವರ್ಷಕ್ಕೆ | – | ಶೇ. 11% |

| | | |
|---|---|---|
| ಉಳಿತಾಯ ಖಾತೆ | – | ಶೇ. 4% |
| ನಿತ್ಯನಿಧಿ ಖಾತೆ | – | ಶೇ. 4% |

## ಸಾಲಗಳ ಮೇಲಿನ ಬಡ್ಡಿದರ

| | | |
|---|---|---|
| ಆಭರಣ ಸಾಲ | – | ಶೇ. 11.50% |
| ಆಸ್ತಿ ಆಧಾರ ಸಾಲ | – | ಶೇ. 14.50% |
| ಆಸ್ತಿ ಆಧಾರ ಓ.ಡಿ. ಸಾಲ | – | ಶೇ. 14.50% |
| ದ್ವಿಚಕ್ರ ವಾಹನ ಸಾಲ | – | ಶೇ. 14.50% |
| ರಾಷ್ಟ್ರೀಯ ಉಳಿತಾಯ ಪತ್ರ ಅಡಮಾನ ಸಾಲ | – | ಶೇ. 14.50% |

- ☞ ಒಂದು ವರ್ಷದ ಮೇಲ್ಪಟ್ಟ ನಿಶ್ಚಿತ ಠೇವಣಿಗಳ ಮೇಲೆ ಹಿರಿಯನಾಗರೀಕರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಶೇ. 1% ರಷ್ಟು ಹೆಚ್ಚುವರಿ ಬಡ್ಡಿಯನ್ನು ನೀಡಲಾಗುವುದು.
- ☞ ಈ ಬಡ್ಡಿದರಗಳು ದಿನಾಂಕ: 01–04–2020 ರಿಂದ ಜಾರಿಗೆ ತರಲಾಗಿದೆ ಇದರ ಸದುಪಯೋಗವನ್ನು ಸದಸ್ಯರು ಹಾಗೂ ಸಾರ್ವಜನಿಕರು ಪಡೆಯಬೇಕೆಂದು ವಿನಂತಿ.
- ☞ ಅವಧಿ ಮುಂಚಿತವಾಗಿ ಮುಕ್ತಾಯಗೊಳಿಸಿದ ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯನ್ನು ಶೇ. 2% ರಷ್ಟು ಕಡಿಗೊಳಿಸಲಾಗುತ್ತದೆ.

ಷೇರು ಖಾತೆಯ ಮುಖಬೆಲೆಯನ್ನು ದಿನಾಂಕ: 21–09–2014ರಂದು ಸಹಕಾರ ಸಂಘಗಳ ನಿಯಮಾವಳಿಗಳ ಪ್ರಕಾರ ಹೆಚ್ಚಿಸಿರುವುದು ಸರಿಯಷ್ಟೇ, ನಿಮ್ಮ ಹಳೆಯ ಷೇರು ಪ್ರಮಾಣ ಪತ್ರವನ್ನು ಸಲ್ಲಿಸಿ ಹೊಸ ಪರಿಷ್ಕೃತ ಷೇರು ಪ್ರಮಾಣ ಪತ್ರವನ್ನು ಪಡೆಯಬೇಕಾಗಿ ಈ ಮೂಲಕ ಸದಸ್ಯರಿಗೆ ಸೂಚಿಸಲಾಗಿದೆ. ಇದು ಕಡ್ಡಾಯ

ಟಿಪ್ಪಣಿ :